ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಡಿಸೆಂಬರ್ 08, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 206 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಖಾಸಗಿ ಬಸ್ ನಿಲ್ದಾಣ ಬಳಕೆಗೆ ಮೊದಲೇ ಬದಲಾವಣೆ

### ಇನ್ನೆರಡು ಬಸ್‌ಗಳ ನಿಲುಗಡೆಗಾಗಿ ಕ್ರಮ : ಸ್ಮಾರ್ಟ್ ಸಿಟಿ ಎಂಡಿ

ದಾವಣಗೆರೆ, ಡಿ. 7 - ಹೊಸದಾಗಿ ನಿರ್ಮಿಸಲಾಗಿರುವ ಖಾಸಗಿ ಬಸ್ ನಿಲ್ದಾಣದ ಬಳಕೆ ಆರಂಭವಾಗುವ ಮೊದಲೇ ಪರಿವರ್ತನೆಗೆ ಒಳಗಾಗಲಿದೆ.

ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿರುವ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಹೆಚ್ಚುವರಿಯಾಗಿ ಇನ್ನೆರಡು ಬಸ್‌ಗಳನ್ನು ನಿಲ್ಲಿಸಲು ನಿಲ್ದಾಣದಲ್ಲಿ ಪರಿವರ್ತನೆ ತರುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಬಸ್ ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ಜಾಗ ಕಡಿಮೆ ಇದೆ ಎಂದು ಖಾಸಗಿ ಬಸ್ ಮಾಲೀಕರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಪೇರ್ ಕೇಸ್ ಮುಚ್ಚಿ 2 ಹೆಚ್ಚುವರಿ ಬಸ್ ನಿಲ್ಲಿಸಲು ಕ್ರಮ ತೆಗೆದುಕೊಳ್ಳಲು ಸಚಿವರು ಸೂಚನೆ ನೀಡಿದ್ದಾರೆ ಎಂದು ಹೇಳಿದರು.



ಖಾಸಗಿ ಬಸ್‌ಗಳ ಸಂಚಾರದ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾಹಿತಿ ಕೇಳಿದ್ದೇವೆ. ಅವರಿಂದ ಮಾಹಿತಿ ದೊರೆತ ನಂತರ, ಬಸ್ ನಿಲ್ದಾಣದಲ್ಲಿ ಬದಲಾವಣೆ ತರುವ ಪ್ರಸ್ತಾವನೆ ರೂಪಿಸಲಾಗುವುದು ಎಂದು ಹೇಳಿದರು.

ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ ನಿಲ್ದಾಣದಲ್ಲಿ ಪರಿವರ್ತನೆ ತಂದು, ನಂತರದಲ್ಲಿ ಅದನ್ನು ಸಾರ್ವಜನಿಕರ ಬಳಕೆಗೆ ನೀಡಲಾಗುವುದು ಎಂದು ವೀರೇಶ್ ಕುಮಾರ್ ಹೇಳಿದರು.

ನಗರದಲ್ಲಿರುವ ಮೊದಲ (2ನೇ ಪುಟಕ್ಕೆ)

### ಕೃತಕ ಬುದ್ಧಿವಂತಿಕೆಯಿಂದ ಸಿಗ್ನಲ್ ಕಿರಿಕಿರಿ: ವೀರೇಶ್ ಕುಮಾರ್

ನಗರದ ಕೆಲ ವೃತ್ತಗಳಲ್ಲಿ ಅಳವಡಿಸಲಾಗಿರುವ ಸಿಗ್ನಲ್‌ಗಳು ಕೃತಕ ಬುದ್ಧಿವಂತಿಕೆ ಮೂಲಕ ವಾಹನಗಳ ಲೆಕ್ಕಾಚಾರ ಮಾಡಿ ಅದಕ್ಕೆ ಅನುಗುಣವಾಗಿ ಸಿಗ್ನಲ್ ಸಮಯ ನಿಗದಿ ಪಡಿಸುತ್ತವೆ. ಆದರೆ, ಕೆಲ ಸಿಗ್ನಲ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಇದೆ ಎಂದು ಸ್ಮಾರ್ಟ್ ಸಿಟಿ ಪ್ರಧಾನ ವ್ಯವಸ್ಥಾಪಕ ವೀರೇಶ್ ಕುಮಾರ್ ತಿಳಿಸಿದರು.

ವೃತ್ತಗಳಲ್ಲಿರುವ ಸಿಗ್ನಲ್‌ಗಳು ವಾಹನ ಸಾಗಲು ಕೆಲವೊಮ್ಮೆ ಅತಿ ಕಡಿಮೆ ಸಮಯ ತೋರಿಸುತ್ತವೆ. ಇದರಿಂದ ಕಿರಿಕಿರಿಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದರು.

ನಾನೂ ಸಹ ಈ ಸಮಸ್ಯೆ ಇರುವುದನ್ನು ಗಮನಿಸಿದ್ದೇನೆ. ಕನಿಷ್ಠ 15 ಸೆಕೆಂಡುಗಳ ಕಾಲವಾದರೂ ಒಂದು ಮಾರ್ಗದ ವಾಹನಗಳು ಸಾಗಲು ಅವಕಾಶ ಇರಬೇಕಿದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದವರು ಹೇಳಿದರು.



**ಬಾಬಾ ಮಂದಿರದಲ್ಲಿ ಕಾರ್ತೀಕ** ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಬಾಬಾ ಮಂದಿರದಲ್ಲಿ ಗುರುವಾರ ಕಾರ್ತೀಕ ಮಹೋತ್ಸವ ಆಚರಿಸಲಾಯಿತು. ಅಪಾರ ಸಂಖ್ಯೆಯ ಭಕ್ತರು ಸರದಿ ಸಾಲಿನಲ್ಲಿ ನಿಂತು ಬಾಬಾರವರ ದರ್ಶನ ಪಡೆದರು.

## ಬಾಂಗ್ಲಾದೇಶಿಗಳ ಹಸ್ತಾಂತರ

### ಅಕ್ರಮ ವಲಸಿಗರ 28 ಕೇಂದ್ರಗಳ ಗುರುತು: ಪರಮೇಶ್ವರ್

ಬೆಳಗಾವಿ, ಡಿ. 7 - ರಾಜ್ಯದಲ್ಲಿ ನೆಲೆಸಿರುವ ಬಾಂಗ್ಲಾದೇಶದ ಅಕ್ರಮ ನಿವಾಸಿಗಳನ್ನು ಪತ್ತೆ ಹಚ್ಚಿ, ಬಿಎಸ್‌ಎಫ್‌ಗೆ ಹಸ್ತಾಂತರಿಸುವುದಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ್ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಉಮಾಶ್ರೀ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈಗಾಗಲೇ ಈ ಅಕ್ರಮ ನಿವಾಸಿಗಳನ್ನು ಗುರುತಿಸುವ ಕಾರ್ಯ ನಡೆದಿದೆ. ನಂತರ ಅವರನ್ನು ಗಡಿಯವರೆಗೂ ಕೊಂಡೊಯ್ದು ಬಿಎಸ್‌ಎಫ್ ಅಧಿಕಾರಿಗಳಿಗೆ ಹಸ್ತಾಂತರಿಸಿ ಗಡೀಪಾರು ಮಾಡಲಾಗುವುದು ಎಂದರು. ನಮ್ಮ ಪೊಲೀಸರು ರಾಜ್ಯಾದ್ಯಂತ 45 ದಿನಗಳ ಕಾಲ ವಿಶೇಷ ಕಾರ್ಯಾಚರಣೆ ನಡೆಸಿ 5000 ಕ್ಕೂ ಅಧಿಕ ಮನೆಗಳ ತಪಾಸಣೆ ಮಾಡಿದ್ದಾರೆ.

ಅಲ್ಲದೆ, ವಲಸಿಗರು ನೆಲಸಿದ್ದಾರೆ ಎಂಬ 28 ಕೇಂದ್ರಗಳನ್ನು ಗುರುತಿಸಲಾಗಿದೆ. ಅವುಗಳ ತಪಾಸಣೆಯೂ ಮುಂದುವರೆದಿದೆ. ರಾಜ್ಯದಲ್ಲಿರುವ ಈ ವಲಸಿಗರನ್ನು ಪತ್ತೆ ಹಚ್ಚಿ ಗಡೀಪಾರು ಮಾಡುವವರೆಗೂ ನಮ್ಮ ಪೊಲೀಸರ ತಂಡದ ವಿಶೇಷ ಕಾರ್ಯಾಚರಣೆ ಮುಂದುವರೆಯಲಿದೆ.

**ಇದುವರೆಗೂ 135 ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಅವರನ್ನು ಹೊರಹಾಕುವ ಕೆಲಸ ನಡೆದಿದೆ: ಗೃಹ ಸಚಿವ**

ಬಾಂಗ್ಲಾ ಅಷ್ಟೇ ಅಲ್ಲ, ಇತರೆ ವಿದೇಶಿ ವಲಸಿಗರನ್ನು ಪತ್ತೆ ಹಚ್ಚುವ ಕೆಲಸ ಗುಪ್ತಚರ ಇಲಾಖೆ ಮಾಡುತ್ತಿದೆ. ನಂತರ ಪೊಲೀಸರು ಅವರನ್ನು ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಳ್ಳಲಿದ್ದಾರೆ. ಇದುವರೆಗೂ ಅಕ್ರಮ ಬಾಂಗ್ಲಾ ಮತ್ತು ವಿದೇಶಿ ವಲಸಿಗರ ಮೇಲೆ 764 ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಬಾಂಗ್ಲಾ ವಲಸಿಗರ ವಿರುದ್ಧ 53 ಪ್ರಕರಣ ದಾಖಲಾಗಿದೆ. ಇದುವರೆಗೂ 135 ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಅವರನ್ನು ಹೊರಹಾಕುವ ಕೆಲಸ ನಡೆದಿದೆ ಎಂದು ಗೃಹ ಸಚಿವರು ಹೇಳಿದರು.

ಜೀವನೋಪಾಯಕ್ಕೆ ವಲಸೆ ಬಂದಿರುವ ಇವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಹದಗೆಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇವರುಗಳು ನಕಲಿ ಆಧಾರ್ ಕಾರ್ಡ್ ಸೇರಿದಂತೆ, ಇನ್ನಿತರೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಕರ್ನಾಟಕದ ವಿವಿಧ ಭಾಗಗಳಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಮಧ್ಯವರ್ತಿಗಳ ಮೂಲಕ ರಾಜ್ಯ ಪ್ರವೇಶಿಸಿ ಕೆಲವರು ವಿವಿಧ ಉದ್ದಿಮೆಗಳಲ್ಲಿ ಕಾರ್ಮಿಕರಾಗಿದ್ದರೆ, ಮತ್ತೆ ಕೆಲವರು ಅಕ್ರಮ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಇವರನ್ನು ಇಲ್ಲಿಗೆ ತಂದು ಬಿಟ್ಟವರನ್ನು ಪತ್ತೆ ಹಚ್ಚಿ ಅವರ ಮೇಲೂ ಕ್ರಮ ಕೈಗೊಳ್ಳಲು ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ ಎಂದರು.

## ಆರ್ಥಿಕವಾಗಿ ಹಿಂದುಳಿದವರು, ಶಿಕ್ಷಣ ವಂಚಿತರಿಗೆ ಮಾತ್ರ ಸೌಲಭ್ಯ ಸಿಗಲಿ

ದಾವಣಗೆರೆ, ಡಿ.7- ಜಾತಿ, ಧರ್ಮಗಳ ಬದಲಾಗಿ ನಿಜವಾಗಿಯೂ ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಶಿಕ್ಷಣದಿಂದ ವಂಚಿತರಾದವರಿಗೆ ಮಾತ್ರ ಸರ್ಕಾರದ ಸೌಲಭ್ಯಗಳು ದೊರೆಯುವಂತಾಗಬೇಕು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಅಭಿಪ್ರಾಯಿಸಿದರು.



ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ವಿದ್ಯಾನಗರ ಶಾಖಾ ಕೇಂದ್ರದ ಆವರಣದಲ್ಲಿ ಒಂದು ತಿಂಗಳ ವರೆಗೆ ನಡೆಯಲಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ ನಾಲ್ಕನೇ ದಿನವಾದ ಗುರುವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ತಳವರ್ಗಕ್ಕೆ ಸೌಲಭ್ಯ ಕೊಡಬೇಕಿರುವುದು ಸ್ವಾಗತ. ಆದರೆ ಜಾತಿ ವ್ಯವಸ್ಥೆ ನೋಡಿ ಸೌಲಭ್ಯ ಕೊಡುವುದು ಸರಿಯಲ್ಲ. ಯಾವುದೇ ಜಾತಿ ಇರಲಿ, ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗುರುತಿಸಿ, ಶಿಕ್ಷಣದಿಂದ ವಂಚಿತರಾದವರನ್ನು ಗುರುತಿಸಿ ಸೌಲಭ್ಯ ಕೊಡುವುದು ಮಾನವ ಧರ್ಮ ಎಂದು ಹೇಳಿದರು.

ಆರ್ಥಿಕತೆ ಆಧಾರದ ಮೇಲೆ ಸೌಲಭ್ಯ ನೀಡುವ ಕಾಯ್ದೆಯನ್ನು ಜಾರಿಗೆ ತರುವ ಅಗತ್ಯವಿದೆ. ಆದರೆ, ಚುನಾವಣೆಯಲ್ಲಿ ಓಟು ಗಳಿಸಲು ಜಾತಿ, ಧರ್ಮಗಳ ಆಧಾರದ ಮೇಲೆ ವಿಂಗಡಿಸಿ, ಮತದಾರರನ್ನು ಓಲೈಸುವ ಪ್ರವೃತ್ತಿ ಹೆಚ್ಚಾಗಿರುವ ದಿನಗಳಲ್ಲಿ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂಬಂತಾಗಿದೆ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು. ಕಲಹಗಳಿಗೆ ಮೂಲವಾಗಿದ್ದ (3ನೇ ಪುಟಕ್ಕೆ)

### ಕೌಶಿಕ ಮಹಾರಾಜನನ್ನು ಅಕ್ಕಮಹಾದೇವಿ ಮದುವೆ ಆಗಿರಲಿಲ್ಲ

**ಶರಣೆ ಅಕ್ಕಮಹಾದೇವಿ, ತಾನು ಕೌಶಿಕ ಮಹಾರಾಜನನ್ನು ಮದುವೆಯಾಗಿಲ್ಲ, ಅವನು ನನ್ನ ಗಂಡ ಅಲ್ಲ ಎಂದು ವಚನಗಳ ಮೂಲಕ ಅನುಭವ ಮಂಟಪದಲ್ಲಿ ಅಧ್ಯಕ್ಷರ ಸಮ್ಮುಖದಲ್ಲಿನ ಸಭೆಯಲ್ಲಿ ಹೇಳುತ್ತಾಳೆ. ನನ್ನ ಪತಿ ಕೇವಲ ಚನ್ನಮಲ್ಲಿಕಾರ್ಜುನ ಮಾತ್ರ ಎಂದು ಪ್ರತಿಪಾದಿಸುತ್ತಾಳೆ.**

**ಆದರೆ ಕೆಲವು ಸಾಹಿತಿಗಳು ಅವರ ಕಾದಂಬರಿಗಳಲ್ಲಿ ಅಕ್ಕಮಹಾದೇವಿ ಜೊತೆ ಕೌಶಿಕ ಮಹಾರಾಜನ ಮದುವೆ ಮಾಡಿದ್ದಾರೆ. ಇದು ದುಃಖದ ವಿಚಾರ ಎಂದು ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.**

**ಅಕ್ಕನ ಬಗ್ಗೆ ನಾನು ಅತೀವ ಗೌರವ ಹೊಂದಿದ್ದೇನೆ. ಈ ಹಿನ್ನೆಲೆಯಲ್ಲಿಯೇ ಅಕ್ಕನ ಸತ್ಯ ಜೀವನವನ್ನು ಪರಿಚಯಿಸುವ ಉದ್ದೇಶದಿಂದ 'ಶಿವಯೋಗಿ ಅಕ್ಕಮಹಾದೇವಿ' ಸಿನಿಮಾ ನಿರ್ಮಾಣ ಮಾಡಿದ್ದೆ ಎಂದು ತಿಳಿಸಿದರು.**

**ಮನರಂಜನೆ, ಹಾಸ್ಯ, ವಿಡಂಬನೆ, ಅಶ್ಲೀಲ ಈ ಚಿತ್ರದಲ್ಲಿ ಇಲ್ಲ ಎಂಬ ಕಾರಣಕ್ಕಾಗಿ ಈ ಚಿತ್ರ ಸಿನಿಮಾ ಮಂದಿರದಲ್ಲಿ ಹೆಚ್ಚು ದಿನ ಪ್ರದರ್ಶನಗೊಳ್ಳಲಿಲ್ಲ. ಇದೊಂದು ಸತ್ಯ ಶುದ್ಧ ವಚನ** (3ನೇ ಪುಟಕ್ಕೆ)

## ಅನಧಿಕೃತ ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ ಸೂಚನೆ

ಬೆಂಗಳೂರು, ಡಿ. 7 – ನಕಲಿ ವೈದ್ಯರು ನಡೆಸುವ ಅನಧಿಕೃತ ಆಸ್ಪತ್ರೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾ ವೈದ್ಯಕೀಯ ಅಧಿಕಾರಿಗಳಿಗೆ ರಾಜ್ಯ ಆರೋಗ್ಯ ಇಲಾಖೆ ಸೂಚನೆ ನೀಡಿದೆ. ಭ್ರೂಣ ಹತ್ಯೆ ಜಾಲ ಪತ್ತೆಯಾದ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ರಾಜ್ಯ ಆರೋಗ್ಯ ಆಯುಕ್ತ ರಣದೀಪ್, ಜಿಲ್ಲಾ ಆರೋಗ್ಯ ಅಧಿಕಾರಿಗಳು ಕ್ಲಿನಿಕ್, ಪ್ರಯೋಗಾಲಯಗಳೂ ಸೇರಿದಂತೆ ಎಲ್ಲಾ ಆರೋಗ್ಯ (3ನೇ ಪುಟಕ್ಕೆ)

## ಅಂತರ್ಜಲ ಕುಸಿತ ಹಿನ್ನೆಲೆ ಪರಿಶೋಧನಾ ಸಮಿತಿ ರಚನೆ

ಬೆಳಗಾವಿ, ಡಿ. 7 - ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತವಾಗಿದ್ದು, ಈ ಕುರಿತು ಅಧ್ಯಯನ ಮಾಡಿ ಸೂಕ್ತ ಶಿಫಾರಸ್ಸು ಮಾಡಲು ತಜ್ಞರನ್ನೊಳಗೊಂಡ ಜಲ ಲೆಕ್ಕ ಪರಿಶೋಧನಾ ಸಮಿತಿ ರಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಗಿಂದು ತಿಳಿಸಿದ್ದಾರೆ. ಬರ ವಿಷಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ (2ನೇ ಪುಟಕ್ಕೆ)

## ಅಗ್ನಿ ಕ್ಷಿಪಣೆ ಪರೀಕ್ಷೆ ಯಶಸ್ವಿ

ಬಾಲಸೋರ್, ಡಿ. 7 – ಅಲ್ಪ ದೂರದ ಅಗ್ನಿ - 1 ಕ್ಷಿಪಣೆಯನ್ನು ಒಡಿಶಾ ಕರಾವಳಿಯ ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಿಂದ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪರೀಕ್ಷೆ ಯಶಸ್ವಿಯಾಗಿದ್ದು, ಎಲ್ಲಾ ಗುರಿಗಳನ್ನು ತಲುಪಿದೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿಂದೆ ಜೂನ್ 1ರಂದು ಈ ಕ್ಷಿಪಣೆಯ ಪರೀಕ್ಷೆ ನಡೆಸಲಾಗಿತ್ತು.

## ಮಠದ ಅಧಿಕಾರ ಮರಳಿ ಪಡೆದ ಶರಣರು



ಚಿತ್ರದುರ್ಗ, ಡಿ.7- ಪೋಕ್ಸೋ ಕಾಯ್ದೆಯಡಿ ಬಂಧಿತರಾಗಿ, ಇದೀಗ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಮುರುಘಾ ಮಠದ ಶ್ರೀ ಮುರುಘಾ ಶರಣರು ತಮ್ಮ ಮಠದ ಅಧಿಕಾರವನ್ನು ಮರಳಿ ಪಡೆದಿದ್ದಾರೆ.

ಪೋಕ್ಸೋ ಪ್ರಕರಣದಲ್ಲಿ ಬಂಧಿತರಾಗಿದ್ದ ಶರಣರು, 14 ತಿಂಗಳು ಸೆರೆಮನೆ ವಾಸ ಅನುಭವಿಸಿದ್ದರು. ಈ ವೇಳೆ ರಾಜ್ಯ ಸರ್ಕಾರ ಮುರುಘಾ ಮಠದ ಆಡಳಿತ ನಿರ್ವಹಿಸಲು ನಿವೃತ್ತ ಐಎಎಸ್ ಅಧಿಕಾರಿ ವಸ್ತ್ರದ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿತ್ತು.

ಈ ನೇಮಕವನ್ನು ಪ್ರಶ್ನಿಸಿ ಮಠದ ಪರ ವಕೀಲರು ಹೈಕೋರ್ಟ್ ಮೊರೆಹೋಗಿದ್ದ ಹಿನ್ನೆಲೆ ಆಡಳಿತಾಧಿಕಾರಿ ನೇಮಕವನ್ನು ಹೈಕೋರ್ಟ್ ರದ್ದುಪಡಿಸಿ, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಿಗೆ ತಾತ್ಕಾಲಿಕವಾಗಿ ಮಠದ ಆಡಳಿತದ ಅಧಿಕಾರ ನೀಡಿತ್ತು. ಹೀಗಾಗಿ ಈವರೆಗೆ ನ್ಯಾಯಾಧೀಶರೇ ಮಠದ ಆಡಳಿತಾಧಿಕಾರಿ ಆಗಿದ್ದರು. ಆದರೆ ನವೆಂಬರ್ 16ರಂದು ಮುರುಘಾಶ್ರೀ ಜಾಮೀನಿನ ಮೇಲೆ (4ನೇ ಪುಟಕ್ಕೆ)

## ಕಬ್ಬಿನಿಂದ ಎಥೆನಾಲ್ ಉತ್ಪಾದನೆ ನಿಷೇಧ


ನವದೆಹಲಿ, ಡಿ. 7 – ಕಬ್ಬಿನ ರಸದಿಂದ ಎಥೆನಾಲ್ ಉತ್ಪಾದಿಸುವುದರ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ದೇಶೀಯವಾಗಿ ಸಕ್ಕರೆ ಲಭ್ಯತೆ ಹೆಚ್ಚಿಸುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಆದರೆ, 2023-24ರ ಸಾಲಿನಲ್ಲಿ 'ಬಿ-ಮೊಲಾಸಿಸ್' ಮೂಲಕ ಎಥೆನಾಲ್ ಉತ್ಪಾದಿಸುವುದಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡಿದೆ. ಸರ್ಕಾರದ ಈ (2ನೇ ಪುಟಕ್ಕೆ)

## ಭಿನ್ನಮತ ನಿವಾರಣೆಗೆ ಹೈಕೋರ್ಟ್ ಸಮಿತಿ

ಬೆಂಗಳೂರು, ಡಿ. 7 – ವಕೀಲರು, ಪೊಲೀಸರು ಹಾಗೂ ಆಡಳಿತದ ನಡುವಿನ ಭಿನ್ನಮತ ನಿವಾರಿಸಲು ಕರ್ನಾಟಕ ಹೈಕೋರ್ಟ್ ಹತ್ತು ಸದಸ್ಯರ ಉನ್ನತ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯಲ್ಲಿ ಅಡ್ವೊಕೇಟ್ ಜನರಲ್, ರಾಜ್ಯ ಡಿ.ಜಿ.ಪಿ. (3ನೇ ಪುಟಕ್ಕೆ)

ಶ್ರೀ ಶಿವನಾರದಮುನಿ ಸ್ವಾಮಿ
ಕಡೇ ಕಾರ್ತಿಕೋತ್ಸವ



ಹರಪನಹಳ್ಳಿ ತಾಲ್ಲೂಕು ಚಿಗಟೇರಿ ಗ್ರಾಮದಲ್ಲಿ
ದಿನಾಂಕ 09.12.2023ರ ಶನಿವಾರ ಸಂಜೆ
ಶ್ರೀ ಶಿವನಾರದಮುನಿ ಸ್ವಾಮಿಯ ಪುಷ್ಪಾಲಂಕಾರದೊಂದಿಗೆ ಸ್ವಾಮಿಯ ಕಡೇ ಕಾರ್ತಿಕೋತ್ಸವವನ್ನು ಪೂಜಾ ವಿಧಿ-ವಿಧಾನಗಳಿಂದ ಸಂಪ್ರದಾಯದ ಪ್ರಕಾರ ವಿಜೃಂಭಣೆಯಿಂದ ನೆರವೇರಿಸಲಾಗುವುದು. ಸರ್ವ ಭಕ್ತಾದಿಗಳು ಸಮಯಕ್ಕೆ ಸರಿಯಾಗಿ ಆಗಮಿಸಿ, ಸ್ವಾಮಿಯ ಕೃಪಾಶೀರ್ವಾದ ಪಡೆಯಲು ವಿನಂತಿ.

ಶ್ರೀ ಅಣಬೇರು ರಾಜಣ್ಣನವರು, ಅಧ್ಯಕ್ಷರು
ಉಪಾಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು
ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.) ಚಿಗಟೇರಿ.

## ಸರ್ಕಾರಿ ನೌಕರರ ಹಳೆ ಪಿಂಚಣಿ ಸಮಿತಿಯ ಪುನರ್‌ರಚನೆ

ಬೆಳಗಾವಿ, ಡಿ. 7- ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಸರ್ಕಾರ ರೂಪಿಸಿದ್ದ ಸಮಿತಿಯನ್ನು ಪುನರ್‌ರಚಿಸಲು ಸಿದ್ದರಾಮಯ್ಯ ಸರ್ಕಾರ ನಿರ್ಧರಿಸಿದೆ.

**ಇತರೆ ರಾಜ್ಯಗಳಲ್ಲಿನ ಒ.ಪಿ.ಎಸ್. ಕ್ರಮಗಳ ಬಗ್ಗೆ ಅಧ್ಯಯನ - ಸಚಿವ ಕೃಷ್ಣ ಭೈರೇಗೌಡ**

ಕಳೆದ ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಏಕ ಸದಸ್ಯರ ಸಮಿತಿಯನ್ನು ರಚಿಸಿತ್ತು. 2006ರ ನಂತರ ಹೊಸ ಪಿಂಚಣಿ ಯೋಜನೆ ಯಲ್ಲಿರುವ ನೌಕರರನ್ನು ಹಳೆ ಪಿಂಚಣಿ ಯೋಜನೆ ತರುವುದಕ್ಕೆ ಸಂಬಂಧಿಸಿ ದಂತೆ ಸಮಿತಿ ರಚಿಸಲಾಗಿತ್ತು. ಈ ಬಗ್ಗೆ ವಿಧಾನ ಪರಿಷತ್‌ನಲ್ಲಿ (3ನೇ ಪುಟಕ್ಕೆ)

## ನೇಪಾಳಕ್ಕೆ ಅಕ್ಕಿ ರಫ್ತು ಮಾಡಲು ಅನುಮತಿ

ನವದೆಹಲಿ, ಡಿ. 7 – ನೇಪಾಳದ ಭೂಕಂಪ ಪೀಡಿತ ಜನರಿಗೆ ನೆರವಾಗಲು 20 ಮೆಟ್ರಿಕ್ ಟನ್ ಅಕ್ಕಿಯನ್ನು ಒಂದು ಬಾರಿಯ ಕ್ರಮವಾಗಿ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಇಂಡಿಯನ್ ರೈಸ್ ಎಕ್ಸ್‌ಪೋರ್ಟರ್ಸ್ ಫೆಡರೇಷನ್ ಅಕ್ಕಿ ರಫ್ತು ಮಾಡಲು ಅನುಮತಿ ನೀಡಲಾಗಿದೆ. ದೇಶದಲ್ಲಿ ಅಕ್ಕಿ ಅವಕ ಕಾಯ್ದುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರ ಜುಲೈ 20ರಂದು ಅಕ್ಕಿ ರಫ್ತಿನ ಮೇಲೆ ನಿಷೇಧ ಹೇರಿತ್ತು.

ಶಾಮನೂರಿನಲ್ಲಿ ಇಂದು ಹಳ್ಳಿಗೌಡ್ರು ರಾಮಚಂದ್ರಪ್ಪನವರ
ಕೈಲಾಸ ಶಿವಗಣಾರಾಧನೆ

ದಾವಣಗೆರೆ ಸಿಟಿ ಶಾಮನೂರು ವಾಸಿ, ರೈತ ಮುಖಂಡರಾದ
ಶಾಮನೂರು ಹೆಚ್. ಆರ್. ಲಿಂಗರಾಜ್ ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ 30.11.2023ನೇ ಗುರುವಾರ ಬೆಳಗಿನ ಜಾವ 4.30ಕ್ಕೆ ನನ್ನ ಪೂಜ್ಯ ತಂದೆ
ಶ್ರೀ ಹಳ್ಳಿಗೌಡ್ರು ರಾಮಚಂದ್ರಪ್ಪ ಎಸ್.ಜಿ.
ಇವರು ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆಯನ್ನು'
ದಿನಾಂಕ : 08.12.2023ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಲಿಂಗೈಕ್ಯರ ಸ್ವಗೃಹ, 4ನೇ ಕ್ರಾಸ್, ನಾಗನೂರು ರಸ್ತೆ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಕುಸುಮ, ಶ್ರೀ ಲಿಂಗರಾಜ್ ಹೆಚ್.ಆರ್.
ಹಳ್ಳಿಗೌಡ್ರು ವಂಶಸ್ಥರು, ಶಾಮನೂರು
ಹಾಗೂ ಬಂಧು-ಮಿತ್ರರು. ಮೊ : 98444 65560
ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಮುದ್ರಾಂಕ ಶುಲ್ಕ ಹೆಚ್ಚಳಕ್ಕಾಗಿ ಮಸೂದೆ ಮಂಡನೆ

ಬೆಳಗಾವಿ, ಡಿ. 7 – ಪವರ್ ಆಫ್ ಅಟಾರ್ನಿ ಹಾಗೂ ಪ್ರಮಾಣ ಪತ್ರಗಳೂ ಸೇರಿದಂತೆ ಹಲವು ಕಾನೂನು ದಾಖಲೆಗಳಿಗಾಗಿ ಸಲ್ಲಿಸುವ ಮುದ್ರಾಂಕ ಶುಲ್ಕವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಮಸೂದೆ ಮಂಡಿಸಿದೆ. ಕರ್ನಾಟಕ ಮುದ್ರಾಂಕ (ತಿದ್ದುಪಡಿ) ಮಸೂದೆಯ ಮೂಲಕ ಕೆಲ ಶುಲ್ಕಗಳನ್ನು ಐದು ಪಟ್ಟು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳು (2ನೇ ಪುಟಕ್ಕೆ)

# ಮಕ್ಕಳಿಗೆ ಮನೆಯಿಂದಲೇ ಉತ್ತಮ ಸಂಸ್ಕಾರ ಕಲಿಸಬೇಕು

## ಜಿಗಳಿ : ಎನ್ನೆಸ್ಸೆಸ್ ಶಿಬಿರದಲ್ಲಿ ಪೋಷಕರಿಗೆ ಬಿಇಓ ಹನುಮಂತಪ್ಪ ಕಿವಿಮಾತು



ಮಲೇಬೆನ್ನೂರು, ಡಿ.7- ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಸಾಲದು. ಶಾಲೆಯಲ್ಲಿ ಕಲಿಸುವ ಶಿಕ್ಷಣದ ಜೊತೆಗೆ ಮನೆಯಲ್ಲಿ ಉತ್ತಮ ಸಂಸ್ಕಾರವನ್ನೂ ಕಲಿಸಬೇಕೆಂದು ಹರಿಹರ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಹನುಮಂತಪ್ಪ ಪೋಷಕರಿಗೆ ಹೇಳಿದರು.

ಅವರು ಗುರುವಾರ ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿರುವ ಎನ್ನೆಸ್ಸೆಸ್ ಶಿಬಿರದ 6ನೇ ದಿನದ ಸಂಜೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಶಿಕ್ಷಣದ ಜೊತೆಗೆ ಸಂಸ್ಕಾರವನ್ನೂ ಕಲಿತರೆ ಸಮಾಜದಲ್ಲಿ ಉತ್ತಮ ನಾಗರಿಕರಾಗಿ, ಶಿಕ್ಷಕರಾಗಿ, ಅಧಿಕಾರಿಗಳಾಗಿ, ವೈದ್ಯರಾಗಿ, ವಕೀಲರಾಗಿ, ರಾಜಕಾರಣಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಸ್ಕಾರವನ್ನು ಮನೆಯಿಂದಲೇ ಕಲಿಸಿ ಎಂದು ಮತ್ತೊಮ್ಮೆ ಪೋಷಕರಿಗೆ ತಿಳಿಸಿದರು.

ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಚಂದ್ರಪ್ಪ ಮಾತನಾಡಿ, ವಿದ್ಯಾರ್ಥಿಗಳಿಗೆ ಸೇವಾ ಮನೋಭಾವನೆ ಮೂಡಿಸಬೇಕೆಂಬ ಉದ್ದೇಶದಿಂದಲೂ ಎನ್ನೆಸ್ಸೆಸ್ ಶಿಬಿರಗಳನ್ನು ಆಯೋಜಿಸಲಾಗಿದೆ.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ವಿ.ನಾಗರಾಜ್, ಶ್ರೀರಂಗನಾಥ ಬಾಲಕೇಂದ್ರದ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ಎಸ್‌ಜೆವಿಪಿ ಕಾಲೇಜಿನ ಉಪನ್ಯಾಸಕ ಕೆ. ಎನ್.ಮಂಜುನಾಥ್, ಶಾಲೆಯ ಶಿಕ್ಷಕ ಜಿ.ಬಿ.ಮಲ್ಲಿಕಾರ್ಜುನ್ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮದ ಮುಖಂಡರಾದ ಕೊಟ್ರಯ್ಯ, ಕೆ.ಷಣ್ಮುಖಪ್ಪ, ಎಸ್‌ಡಿಎಂಸಿ ಉಪಾಧ್ಯಕ್ಷೆ ಶ್ರೀಮತಿ ರೇಣುಕಮ್ಮ ನಿಂಗಪ್ಪ, ಸದಸ್ಯರಾದ ವಿಜಯಭಾಸ್ಕರ್, ತೆಲಗಿ ನಾಗರಾಜ್, ಕೆ. ಆಂಜನೇಯ, ಶ್ರೀಮತಿ ರತ್ನಮ್ಮ ಬಸವರಾಜ್, ಶ್ರೀಮತಿ ಸುನೀತಾ ಟಿ. ನಾಗರಾಜ್, ಶ್ರೀಮತಿ ಪ್ರಿಯಾ ಟಿ.ಮಧು, ಶ್ರೀಮತಿ ಮಂಜುಳಾ ಮಾಲತೇಶ್, ಶ್ರೀಮತಿ ನೂರ್‌ಜಾನ್ ಚಮನ್‌ಸಾಬ್, ಶ್ರೀಮತಿ ಶೀಲಾ ಹನುಮಂತಪ್ಪ, ಟಿ.ಎಸ್. ಗದಿಗೇಶ್, ಡಿ.ಪಿ.ಚಿದಾನಂದ್, ಶಿಕ್ಷಕ ಕೆ.ಡಿ.ಗುಡ್ಡಪ್ಪ, ಪತ್ರಕರ್ತ ಪ್ರಕಾಶ್, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಬಿ.ಕೆ.ಮಂಜುನಾಥ್, ಡಾ.ಸಿ. ಚಂದ್ರಶೇಖರ್ ಹಾಗೂ ಇತರರು ಭಾಗವಹಿಸಿದ್ದರು.

# ಉದ್ಯೋಗ ಖಾತರಿಯಿಂದ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆ



## ಜಿಗಳಿ : ನರೇಗಾ ಸಾಮಾಜಿಕ ಲೆಕ್ಕ ಪರಿಶೋಧನೆ ಗ್ರಾಮ ಸಭೆಯಲ್ಲಿ ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್ ಅಭಿಮತ

ಮಲೇಬೆನ್ನೂರು, ಡಿ.7- ಉದ್ಯೋಗ ಖಾತರಿ ಯೋಜನೆಯಿಂದ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಲಿದ್ದು, ಜಾರಿಗೆ ತಂದಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಜಿ.ಪಂ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಹೇಳಿದರು.

ಜಿಗಳಿ ಗ್ರಾಮದ ಗ್ರಾ.ಪಂ. ಕಛೇರಿ ಆವರಣದಲ್ಲಿ ಇಂದು ಹಮ್ಮಿಕೊಂಡಿದ್ದ ಉದ್ಯೋಗ ಖಾತರಿ ಯೋಜನೆಯ 2022-23ನೇ ಸಾಲಿನ 15ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನೆ ಗ್ರಾಮ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಿಡಿಓ ಕೆ.ಎಸ್. ಉಮೇಶ್ ಸ್ವಾಗತಿಸಿದರು. ತಾ.ಪಂ. ಪ್ರಭಾರ ಇಓ ರಾಮಕೃಷ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಪಂ. ಸಾಮಾಜಿಕ ಲೆಕ್ಕಪರಿಶೋಧನೆ ತಂಡದ ದಾಸಪ್ಪರೆಡ್ಡಿ ನರೇಗಾ ವರದಿಯನ್ನು ಸಭೆಗೆ ವಿವರವಾಗಿ ಓದಿ ತಿಳಿಸಿದರು.

ತಾ.ಪಂ. ಸಹಾಯಕ ನಿರ್ದೇಶಕ ಜಿ.ಆರ್. ಸುನಿಲ್, ಜಿ.ಪಂ. ಎಇಇ ಬಿ.ಕೆ. ಹರೀಶ್, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ವೈ. ಚೇತನ್‌ಕುಮಾರ್, ಗ್ರಾ.ಪಂ. ಸದಸ್ಯರಾದ ಡಿ.ಎಂ. ಹರೀಶ್, ಎನ್.ಎಂ. ಪಾಟೀಲ್, ಕೆ.ಜಿ. ಬಸವರಾಜ್, ಶ್ರೀಮತಿ ಕರಿಯಮ್ಮ, ಶ್ರೀಮತಿ ಕವಿತಾ ಮಾಕನೂರು ಶಿವು, ಶ್ರೀಮತಿ ವಿನೋದ ಜಿ.ಆರ್. ಹಾಲೇಶ್‌ಕುಮಾರ್, ಶ್ರೀಮತಿ ರೇಣುಕಾ ಪೂಜಾರ್ ನಾಗರಾಜ್, ಶ್ರೀಮತಿ ಮಂಜುಳಾ ಸಿ.ಎನ್. ಪರಮೇಶ್ವರಪ್ಪ, ಎಂ.ಎಸ್. ಮಲ್ಲನಗೌಡ, ಜಿ. ಬೇವಿನಹಳ್ಳಿ ಹೋಬಳಿ ಆನಂದಗೌಡ, ಪಿ.ಹೆಚ್. ದೇವರಾಜ್, ಕೆ.ಜಿ. ಮಹಾಂತೇಶ್, ಶ್ರೀಮತಿ ಜಯಮ್ಮ ಬಿ.ಕೆ. ರಂಗನಾಥ್, ಶ್ರೀಮತಿ ಆಶಾ ಅಣ್ಣಪ್ಪ, ಶ್ರೀಮತಿ ರೇಣುಕಮ್ಮ ರಂಗಪ್ಪ, ಬಸಾಪುರದ ಎ.ಕೆ. ಹನುಮಂತಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಪಿಎಸಿಎಸ್ ಅಧ್ಯಕ್ಷ ಬಿ.ಎಸ್. ಕುಬೇರಸ್ವಾಮಿ, ಹಾ.ಉ.ಸ. ಸಂಘದ ಅಧ್ಯಕ್ಷ ಜಿ.ಎಂ. ವೀರನಗೌಡ, ಎಸ್‌ಡಿಎಂಸಿ ಅಧ್ಯಕ್ಷ ಬಿ. ಪ್ರಭಾಕರ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ. ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಎಕ್ಕೆಗೊಂದಿ ರುದ್ರಗೌಡ, ಹೊಳೆಸಿರಿಗೆರೆ ವೈದ್ಯಾಧಿಕಾರಿ ಡಾ. ಚೇತನ್, ಸಿಆರ್‌ಪಿ ನಂಜುಂಡಪ್ಪ, ಸಿಡಿಪಿಓ ಪೂರ್ಣಿಮಾ, ಸಾಮಾಜಿಕ ಕಾರ್ಯಕ್ರಮದ ಜಿಲ್ಲಾ ವ್ಯವಸ್ಥಾಪಕ ಜಯಪ್ರಕಾಶ್, ತಾಲ್ಲೂಕು ವ್ಯವಸ್ಥಾಪಕರಾದ ಶ್ರೀಮತಿ ವಾಣಿ, ತಾಂತ್ರಿಕ ಇಂಜಿನಿಯರ್ ಬಿ.ಎಸ್. ಸುಜಾತ, ಗ್ರಾ.ಪಂ. ಕಾರ್ಯದರ್ಶಿ ಸುಜಾತ, ಗ್ರಾ.ಪಂ. ಲೆಕ್ಕ ಸಹಾಯಕ ಬಿ. ಮೌನೇಶ್, ಕಂಪ್ಯೂಟರ್ ಆಪರೇಟರ್ ಪ್ರಕಾಶ್, ಸಿಬ್ಬಂದಿಗಳಾದ ಬಸವರಾಜಯ್ಯ, ಮೃತ್ಯುಂಜಯ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸ್ಥಳೀಯ ಕ್ಷೇತ್ರದಿಂದ ರಾಹುಲ್ ಗಾಂಧಿ ಸ್ಪರ್ಧೆಗೆ ಇಚ್ಛಿಸಿದರೆ ಸ್ವಾಗತ



ಜಗಳೂರು, ಡಿ. 7 - ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ರಾಹುಲ್ ಗಾಂಧಿ ಅವರು ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿರುವ ನಾನು ಸ್ವಾಗತಿಸುವೆ ಎಂದು ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ತಿಳಿಸಿದ್ದಾರೆ. ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕರ್ನಾಟಕದಿಂದ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಲು ಚರ್ಚೆ ನಡೆಯುತ್ತಿದ್ದು.ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಇಚ್ಛಿಸಿದರೆ ನನ್ನ ಸಂಪೂರ್ಣ ಬೆಂಬಲ ಹಾಗೂ ಸ್ವಾಗತವಿದೆ.

ರಾಹುಲ್ ಗಾಂಧಿ ಅವರ ಸ್ಪರ್ಧೆಯಿಂದ ದಾವಣಗೆರೆ ಅಕ್ಕ-ಪಕ್ಕದ ಕ್ಷೇತ್ರದ ಮೇಲೆ ಪ್ರಭಾವ ಬೀರಿ ಗೆಲುವು ಹೆಚ್ಚಾಗಲಿದೆ. ಜೊತೆಗೆ ರಾಜ್ಯದಲ್ಲಿ 25ಕ್ಕೂ ಅಧಿಕ ಸ್ಥಾನಗಳನ್ನು ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೊನ್ನೆ ನಡೆದ ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಾತ್ಕಾಲಿಕ ಹಿನ್ನಡೆಯಾಗಿದ್ದರೂ ಕೂಡ ಕಾಂಗ್ರೆಸ್ ಪಕ್ಷ ಒಟ್ಟು 4,90,69,462 ಮತಗಳನ್ನು ಪಡೆದಿದೆ. ಆದರೆ ಬಿಜೆಪಿ ಪಕ್ಷ 4,81,29,325 ಮತಗಳನ್ನು ಪಡೆದಿದ್ದು.ಚುನಾವಣೆಯಲ್ಲಿ ಗೆದ್ದ ಸದಸ್ಯರಿಗಿಂತ ಅಧಿಕ ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ಮತದಾರ ಪ್ರಭುಗಳು ಚಲಾಯಿಸಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಹುಮತದಿಂದ ಗೆಲುವು ಸಾಧಿಸಿ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವುದು ಶತಃಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ನಗರದಲ್ಲಿ ಇಂದು ಆಹ್ವಾನಿತ ಟೆನ್ನಿಸ್ ಪಂದ್ಯಾವಳಿ

ಡಿಸ್ಟ್ರಿಕ್ಟ್ ಟೆನ್ನಿಸ್ ಅಸೋಸಿಯೇಷನ್ (ಡಿಟಿಎ), ವತಿಯಿಂದ 3 ದಿನಗಳ ರಾಜ್ಯ ಮಟ್ಟದ ಆಹ್ವಾನಿತ ಟೆನ್ನಿಸ್ ಪಂದ್ಯಾವಳಿ ನಡೆಯಲಿದೆ. ಈ ಪಂದ್ಯಾವಳಿಯ ಉದ್ಘಾಟನೆ ಇಂದು ಬೆಳಿಗ್ಗೆ 9 ಗಂಟೆಗೆ ಡಿಟಿಎ ಟೆನ್ನಿಸ್ ಕೋರ್ಟ್‌ಗಳಲ್ಲಿ ನಡೆಯಲಿದೆ. 3 ಸೈಟ್‌ಗಳಲ್ಲಿ ನಡೆಸಲಾಗುವುದು. ಡಿಟಿಎ ಟೆನ್ನಿಸ್ ಕೋರ್ಟ್‌ಗಳು, ಪ್ರೌಢಶಾಲಾ ಮೈದಾನ (ಮುಕ್ತ ವಿಭಾಗ, 35+), ದಾವಣಗೆರೆ ಕ್ಲಬ್ (45+ ಮತ್ತು 55+ ವಯೋಮಾನದ ವಿಭಾಗ), ಆಫೀಸರ್ಸ್ ಕ್ಲಬ್ (65+ ವಯಸ್ಸಿನ ವಿಭಾಗ)ನಲ್ಲಿ ನಡೆಯಲಿವೆ.ರವಿಸಲಾಗುವುದು.

# ಜಗಳೂರು : ರುದ್ರಭೂಮಿಯಲ್ಲಿ ಅಂಬೇಡ್ಕರ್ ಪರಿನಿರ್ವಾಣ, ಮೌಢ್ಯತೆ ಪರಿವರ್ತನಾ ಆಚರಣೆ



ಜಗಳೂರು, ಡಿ.7- ಪಟ್ಟಣದ ರುದ್ರಭೂಮಿಯಲ್ಲಿ ಮಾನವ ಬಂಧುತ್ವ ವೇದಿಕೆ ವತಿಯಿಂದ ಉಪಹಾರ ಸೇವನೆಯೊಂದಿಗೆ ಡಾ. ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ಕಾರ್ಯಕ್ರಮ ಹಾಗೂ ಮೌಢ್ಯ ಪರಿವರ್ತನಾ ದಿನವನ್ನಾಗಿ ಆಚರಿಸಲಾಯಿತು.

ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ವಕೀಲ ಟಿ. ಬಸವರಾಜ್ ಮಾತನಾಡಿ, ಕಳೆದ ದಶಕದಿಂದ ಮಾನವ ಬಂಧುತ್ವ ವೇದಿಕೆಯ ರೂವಾರಿಗಳು ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರ ನೇತೃತ್ವದಲ್ಲಿ ಡಿಸೆಂಬರ್ 6 ರಂದು ಅಂಬೇಡ್ಕರ್ ಪರಿನಿರ್ವಾಣದ ಅಂಗವಾಗಿ ಬೆಳಗಾವಿಯ ಸದಾಶಿವ ನಗರದ ವೀರಶೈವ ರುದ್ರಭೂಮಿಯಲ್ಲಿ ಎರಡು ದಿನಗಳ ಕಾಲ ವೈಚಾರಿಕ, ವೈಜ್ಞಾನಿಕತೆ ಪ್ರಚಾರ, ಮೌಢ್ಯಮುಕ್ತಕ್ಕಾಗಿ ಆಯೋಜಿಸುತ್ತಿದ್ದ ಸ್ಮಶಾನ ವಾಸ್ತವ್ಯ ಕಾರ್ಯಕ್ರಮದಲ್ಲಿ ತಾಲ್ಲೂಕಿನಿಂದ ಭಾಗವಹಿಸಲಾಗುತ್ತಿತ್ತು.

ಪ್ರಸಕ್ತ ಚಳಿಗಾಲದ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸ್ಮಶಾನದಲ್ಲಿ ಉಪಹಾರ ಸೇವಿಸಿ ಮೌಢ್ಯತೆ ಪರಿವರ್ತನೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಮುಖಂಡ ಕಾನನಕಟ್ಟೆ ಪ್ರಭು ಮಾತನಾಡಿ, ಸಂವಿಧಾನದ ಆಶಯದಂತೆ ತಳ ಸಮುದಾಯಗಳು ಶಿಕ್ಷಣ ಪಡೆದು, ದೇವರುಗಳ ಹೆಸರಿನಲ್ಲಿ ನಡೆಸುವ ಮೂಢನಂಬಿಕೆ, ಕಂದಾಚಾರಗಳಿಂದ ಮುಕ್ತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕಿದೆ ಎಂದರು.

ವಕೀಲ ಸಣ್ಣ ಓಬಯ್ಯ ಮಾತನಾಡಿ, ದೇಶಕ್ಕೆ ಸಂವಿಧಾನವೇ ಪವಿತ್ರ ಗ್ರಂಥವಾಗಿದೆ. ಕೆಲವರಿಂದ ಸಂವಿಧಾನ ತಿರುಚುವ ಹುನ್ನಾರ ನಡೆಯತ್ತಿದೆ. ಸಂವಿಧಾನ ಬದಲಾವಣೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ, ಅದಕ್ಕೆ ದಕ್ಕೆ ಉಂಟಾದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾನವ ಬಂಧುತ್ವ ವೇದಿಕೆ ಪದಾಧಿಕಾರಿಗಳಾದ ಎ.ಡಿ.ನಾಗಲಿಂಗಪ್ಪ, ಧನ್ಯಕುಮಾರ್, ಎಚ್.ಎಂ.ಹೊಳೆ, ಡಿಎಸ್‌ಎಸ್ ಸಂಚಾಲಕ ಸತೀಶ್, ಮಾದಿಹಳ್ಳಿ ಮಂಜುನಾಥ್, ಸಿದ್ದಮ್ಮನಹಳ್ಳಿ ಬಸವರಾಜ್ ಮುಂತಾದವರು ಇದ್ದರು.

# ವಾಯುಮಾಲಿನ್ಯ ತಡೆಗಟ್ಟುವಿಕೆ - ನಿಯಂತ್ರಣ ಕಾಯ್ದೆ ಅಡಿಯಲ್ಲಿ ಶಿಕ್ಷೆ-ದಂಡ

**ಹರಪನಹಳ್ಳಿ**

ಹರಪನಹಳ್ಳಿ, ಡಿ. 7 - ವಾಯುಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾಯ್ದೆ 1981ರ ಕಲಂ 37ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ರೂ.3000/- ದಂಡ ಮತ್ತು 1 ವರ್ಷ 6 ತಿಂಗಳಗಳ ಕಾಲ ಸಾದಾ ಕಾರಾಗೃಹ ಶಿಕ್ಷೆಯನ್ನು ಹರಪನಹಳ್ಳಿ ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಪ್ರಕರಣದ ಆರೋಪಿಗಳಾದ ಹಿರೇಮೇಗಳಗೇರಿ ಗ್ರಾಮದ ಎಂ. ಕೆಂಚವೀರಪ್ಪ, ಸತ್ತೂರು ಎ. ಕೊಂಡಯ್ಯ, ಬೇವಿನಹಳ್ಳಿ ರಾಘು ಪಾಟೀಲ್, ಕಮ್ಮತ್ತಹಳ್ಳಿ ಕೆ. ಪ್ರಕಾಶ್, ಪೋತಲಕಟ್ಟೆ ಡಿ. ರೇವಣಸಿದ್ದಪ್ಪ, ಫಣಿಯಾಪುರ ನಸೀರ್ ಆಹ್ಮದ್, ಗೊಲ್ಲರಹಟ್ಟಿ ಕೆ. ಶಿವಮ್ಮ, ಪೋತಲಕಟ್ಟೆ ನಾಗರಾಜ್ ಪಟೇಲ್, ಬೇವಿನಹಳ್ಳಿ ದೊಡ್ಡ ತಾಂಡಾದ ಹೀರಾನಾಯ್ಕ ಒಟ್ಟು 9 ಪ್ರಕರಣದ 9 ಜನ ಆರೋಪಿಗಳಿಗೆ ಶಿಕ್ಷೆ ಮತ್ತು ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

**ಘಟನೆ ಹಿನ್ನೆಲೆ :** ಅರಸೀಕೆರೆ ಪೊಲೀಸ್ ಠಾಣೆಯಲ್ಲಿ 2013 ರಂದು ವಾಯುಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾಯ್ದೆ 1981 ರ ಕಲಂ. 37ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಅಂತಿಮವಾಗಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಗಳನ್ನು ಸಲ್ಲಿಸಿದ ಬಳಿಕ ಸದರಿ ಪ್ರಕರಣದ ಆರೋಪಿಗಳ ವಿಚಾರಣೆ ನಡೆಸಿದ ಬಳಿಕ ಆರೋಪಿಗಳ ಪರವಾಗಿ ವಕೀಲರುಗಳು ವಾದವನ್ನು ಮಂಡಿಸಿದರು. ಪಿರ್ಯಾದುದಾರರ ಪರವಾಗಿ ಬಿ. ಕೃಷ್ಣಮೂರ್ತಿ ವಕೀಲರು ವಾದ ಮಂಡಿಸಿದರು. ಪರಸ್ಪರ ವಾದವಿವಾದವನ್ನು ಆಲಿಸಿದ ಹರಪನಹಳ್ಳಿ ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ರವರು ಅಂತಿಮವಾಗಿ ಒಟ್ಟು 9 ಪ್ರಕರಣದ 9 ಜನ ಆರೋಪಿಗಳ ವಿರುದ್ಧ 1 ವರ್ಷ 6 ತಿಂಗಳ ಕಾರಾಗೃಹ ಶಿಕ್ಷೆ ಮತ್ತು ರೂ. 3000/- ಗಳು ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

# ಆವರಗೆರೆಯಲ್ಲಿ ಇಂದು ದತ್ತಿ ಕಾರ್ಯಕ್ರಮ ಉಪನ್ಯಾಸ

ಶರಣ ಸಾಹಿತ್ಯ ಪರಿಷತ್ತು ಮೈಸೂರು, ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ನಗರ ಘಟಕ, ಸರ್ಕಾರಿ ಪ್ರೌಢಶಾಲೆ, ಆವರಗೆರೆ ಮತ್ತು ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆ, ಆವರಗೆರೆ ಇವರ ಸಹಯೋಗದಲ್ಲಿ ಇಂದು ದತ್ತಿ ಕಾರ್ಯಕ್ರಮ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆವರಗೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯುವ 726ನೇ ದತ್ತಿ ಲಿಂ. ಶರಣೆ ಶ್ರೀಮತಿ ಬಸಮ್ಮ ಮತ್ತು ಲಿಂ. ಮಾಗೋಡ್ರ ಪಕ್ಕೀರಪ್ಪ ಕೊಂಡಜ್ಜಿ ದತ್ತಿ (ದಾನಿಗಳು : ಎಂ. ಹನುಮನಗೌಡ ಬಿನ್ ಎಂ. ಪಕ್ಕೀರಪ್ಪ, ದಾವಣಗೆರೆ) ಕಾರ್ಯಕ್ರಮವನ್ನು ಆವರಗೆರೆ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ.ಪಿ. ಕೇಶವಮೂರ್ತಿ ಉದ್ಘಾಟಿಸುವರು.

ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಅಧ್ಯಕ್ಷತೆ ವಹಿಸುವರು. ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರ ವಿಷಯವಾಗಿ ಶರಣ ಸಾಹಿತ್ಯ ಪರಿಷತ್ತು ಕಾರ್ಯದರ್ಶಿ ಭರಮಪ್ಪ ಮೈಸೂರು ಅನುಭಾವ ನುಡಿಗಳನ್ನಾಡುವರು.

# ಪರಿಶೋಧನಾ ಸಮಿತಿ ರಚನೆ

**(1ನೇ ಪುಟದಿಂದ)** ಮಾತನಾಡಿದ ಅವರು, ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ರಾಜ್ಯ ಸರ್ಕಾರವು ಎಲ್ಲಾ ರೀತಿಯ ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖಾಂತರ ಪ್ರತಿ ಜಿಲ್ಲೆಯಲ್ಲಿ ತುರ್ತು ಯೋಜನೆ ತಯಾರಿಸಲಾಗಿದ್ದು, ಪ್ರತಿ ತಿಂಗಳು ತಾವು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ಜರುಗಿಸಿ ಪ್ರಗತಿ ಪರಿಶೀಲನೆ ಮಾಡಲಾಗುತ್ತಿದೆ ಎಂದರು. ಬರ ನಿರ್ವಹಣೆಯಲ್ಲಿ ಲೋಪವಾಗದಂತೆ, ಮುಂದಿನ ದಿನಗಳಲ್ಲಿ ಉದ್ಭವಿಸಬಹುದಾದ ಬರ ಹಿನ್ನೆಲೆಯ ಸಮಸ್ಯೆಗಳ ಬಗ್ಗೆ ಸರ್ಕಾರವು ಮುನ್ನೆಚ್ಚರಿಕೆ ವಹಿಸಿದೆ. ಪ್ರತಿ ಜಿಲ್ಲಾ ಪಂಚಾಯತಿಯ ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದಲ್ಲಿ ಕುಡಿಯುವ ನೀರಿಗಾಗಿ ಒಂದು ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲಾಗಿದೆ. ಸದನ ಸದಸ್ಯರ ಸಲಹೆ ಮೇರೆಗೆ ಅಗತ್ಯವಿರುವ ಕ್ರಮ ವಹಿಸುವುದಾಗಿ ಅವರು ತಿಳಿಸಿದರು.

# ಕೇಂದ್ರ ಸಚಿವರಾದ ತೋಮರ್, ಪಟೇಲ್, ರೇಣುಕಾ ರಾಜೀನಾಮೆ ಅಂಗೀಕಾರ

ನವದೆಹಲಿ, ಡಿ. 7 – ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಪ್ರಹ್ಲಾದ್ ಸಿಂಗ್ ಪಟೇಲ್ ಹಾಗೂ ರೇಣುಕಾ ಸಿಂಗ್ ಸರುಟಾ ನೀಡಿರುವ ರಾಜೀನಾಮೆಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಗೀಕರಿಸಿದ್ದಾರೆ. ಇವರು ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದರು.

ಇದೇ ವೇಳೆ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರಿಗೆ ಹೆಚ್ಚುವರಿಯಾಗಿ ಕೃಷಿ ಸಚಿವಾಲಯದ ಹೊಣೆ ನೀಡಲಾಗಿದೆ.

ಎಲೆಕ್ಟ್ರಾನಿಕ್ಸ್ ಹಾಗೂ ಐ.ಟಿ. ಸಚಿವ ರಾಜೀವ್ ಚಂದ್ರಶೇಖರ್ ಅವರಿಗೆ ಹೆಚ್ಚುವರಿಯಾಗಿ ಜಲ ಶಕ್ತಿ ಖಾತೆ ನೀಡಲಾಗಿದೆ. ಆಹಾರ ಸಂಸ್ಕರಣೆ ಉದ್ಯಮಗಳ ಇಲಾಖೆಯನ್ನು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ನೀಡಲಾಗಿದೆ.

ಆರೋಗ್ಯ ಸಚಿವಾಲಯದ ರಾಜ್ಯ ಸಚಿವರಾದ ಡಾ. ಭಾರತಿ ಪ್ರವೀಣ್ ಪವಾರ್ ಅವರಿಗೆ ಬುಡಕಟ್ಟು ವ್ಯವಹಾರಗಳ ರಾಜ್ಯ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

# ಖಾಸಗಿ ಬಸ್ ನಿಲ್ದಾಣ ಬಳಕೆಗೆ ಮೊದಲೇ ಬದಲಾವಣೆ

**(1ನೇ ಪುಟದಿಂದ)** ಹಂತದಲ್ಲಿ ನಿರ್ಮಿಸ ಲಾಗಿರುವ ಇ-ಶೌಚಾಲಯಗಳು ನಿರ್ವಹಣೆ ಇಲ್ಲದೇ ಕಾರ್ಯನಿರ್ವಹಿಸದಂತಾಗಿದೆ. ಇವುಗಳ ನಿರ್ವಹಣೆಗಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಹೊಂಡದ ಸರ್ಕಲ್‌ನಲ್ಲಿ ನಿರ್ಮಿಸಲಾಗಿರುವ ಕಲ್ಯಾಣಿಗೆ ಶೀಘ್ರದಲ್ಲೇ ಸೌಂದರ್ಯೀಕರಣದ ಕಾಮಗಾರಿ ಕೈಗೊಳ್ಳಲಾಗುವುದು. ತಾಂತ್ರಿಕ ಕಾರಣಗಳಿಂದಾಗಿ ಕಾಮಗಾರಿ ತಡವಾಗಿತ್ತು ಎಂದವರು ಹೇಳಿದರು.

ಸ್ಮಾರ್ಟ್ ಸಿಟಿಯ ಎರಡನೇ ಹಂತದ ಐ.ಸಿ.ಟಿ. ಯೋಜನೆಗೆ 8 ಕೋಟಿ ರೂ. ಒದಗಿಸಲಾಗಿದೆ. ಈ ಯೋಜನೆಯಡಿ ಸಂಚಾರಿ ಪೊಲೀಸರಿಗೆ ವೃತ್ತಗಳಲ್ಲಿ ಬೂತ್ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ಎರಡು ಡ್ರೋನ್‌ಗಳನ್ನು ಒದಗಿಸಲಾಗುವುದು. ಇದರಿಂದ ನಗರದ ಮೇಲೆ ಪೊಲೀಸರು ಹೆಚ್ಚಿನ ನಿಗಾ ವಹಿಸಲು ಸಾಧ್ಯವಾಗಲಿದೆ ಎಂದು ವೀರೇಶ್ ಕುಮಾರ್ ತಿಳಿಸಿದರು.

# ಕೊಲೆ ಆರೋಪಿ ಗಂಡನಿಗೆ ಶಿಕ್ಷೆ

ದಾವಣಗೆರೆ, ಡಿ.7- ಕುಡಿದ ಮತ್ತಿನಲ್ಲಿ, ಊಟಕ್ಕೆ ಚಿಕನ್ ಮಾಡಿಲ್ಲವೆಂದು ಜಗಳ ತೆಗೆದು, ಹೆಂಡತಿಯನ್ನು ಚಾಕುವಿನಿಂದ ತಿವಿದು ಕೊಲೆ ಮಾಡಿರುವ ಆರೋಪಿ ಗಂಡನಿಗೆ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 6 ವರ್ಷ ಕಾರಾಗೃಹ ವಾಸ ಮತ್ತು 10 ಸಾವಿರ ರೂಪಾಯಿ ದಂಡ ವಿಧಿಸಿದೆ.

ಮದ್ಯಪಾನ ಮಾಡಿ ಬಂದು ತನ್ನ ಹೆಂಡತಿ ಶ್ರೀಮತಿ ಶೀಲಾ ಎಡಭುಜಕ್ಕೆ ಹೊಡೆದು ಕೊಲೆ ಮಾಡಿರುತ್ತಾನೆಂದು ಬನ್ನಿಕೋಡು ಗ್ರಾಮದ ಮಾಗಾನಹಳ್ಳಿ ಕೆಂಚಪ್ಪ ಎಂಬಾತನ ಮೇಲೆ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವೃತ್ತ ನಿರೀಕ್ಷಕ ಯು. ಸತೀಶ್ ಪ್ರಕರಣದ ತನಿಖೆ ಪೂರೈಸಿ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಜೆ.ವಿ ವಿಜಯಾ ನಂದ ಅವರು ಆರೋಪಿ ಕೆಂಚಪ್ಪಗೆ ಶಿಕ್ಷೆ ವಿಧಿಸಿದರು. ಪಿರ್ಯಾದಿ ಪರವಾಗಿ ಸರ್ಕಾರಿ ವಕೀಲ ಸತೀಶಕುಮಾರ್ ನ್ಯಾಯ ಮಂಡನೆ ಮಾಡಿರುತ್ತಾರೆ.

ಕೊಲೆ ಪ್ರಕರಣದಲ್ಲಿ ಉತ್ತಮವಾಗಿ ತನಿಖೆ ಮಾಡಿ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿದ ಅಧಿಕಾರಿ, ಸಿಬ್ಬಂದಿಗಳಿಗೂ ಹಾಗೂ ನ್ಯಾಯ ಮಂಡನೆ ಮಾಡಿದ ಸರ್ಕಾರಿ ವಕೀಲರ ಕಾರ್ಯವನ್ನು ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಪ್ರಶಂಸಿಸಿದ್ದಾರೆ.


**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಕೆ.ಟಿ.ಜೆ ನಗರ 10ನೇ ಕ್ರಾಸ್ ವಾಸಿ
**ಶ್ರೀ ಬಿ.ವೈ ರತ್ನಾಕರ್ ಬಗರೆ ಇವರು ಮಾಡುವ ವಿಜ್ಞಾಪನೆಗಳು.**
ನಮ್ಮ ಧರ್ಮಪತ್ನಿಯವರಾದ
**ಶ್ರೀಮತಿ ಶಿಲ್ಪಾ ರತ್ನಾಕರ್ ಬಗರೆ**
ಇವರು, ದಿನಾಂಕ 29.11.2023 ನೇ ಬುಧವಾರ ಬೆಳಗಿನ ಜಾವ 4.10ಕ್ಕೆ ಸ್ವರ್ಗಸ್ಥರಾದ ಪ್ರಯುಕ್ತ ತತ್ಸಬಂಧದ
**ಉತ್ತರಾಧಿ ಕಾರ್ಯಗಳು**
ದಿನಾಂಕ 08.12.2023ನೇ ಶುಕ್ರವಾರ ಬೆಳಿಗ್ಗೆ 12 ಗಂಟೆಗೆ ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಮತ್ತು
ಮೃತರ ಆತ್ಮಶಾಂತಿಗಾಗಿ **'ವೈಕುಂಠ ಸಮಾರಾಧನೆಯನ್ನು'**
ದಿನಾಂಕ:09.12.2023ನೇ **ಶನಿವಾರ ಮಧ್ಯಾಹ್ನ 1.00 ಗಂಟೆಗೆ ದಾವಣಗೆರೆ ಕೆಟಿಜೆ ನಗರದ 10ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು** ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ದುಃಖತಪ್ತರು : **'ಉಷಾ ಟ್ರೇಡಿಂಗ್ ಕಂಪನಿ, ಹೋಲಿಗೆ ಯಂತ್ರಗಳ ಮಾರಾಟಗಾರರು'**
**ಶ್ರೀ ಬಿ.ವೈ ರತ್ನಾಕರ ಬಗರೆ ಮತ್ತು ಸಹೋದರರು ಬಗರೆ ವಂಶಸ್ಥರು ಹಾಗೂ ಬಂಧು-ಮಿತ್ರರು.**
ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 4.12.2023ರ ಸೋಮವಾರದಂದು ನಿಧನರಾದ
**ಶ್ರೀಮತಿ ಸಾಯಿನಿ** (ಸಾಯಿನಿ ಆರ್ ಖರೆ)
ನರ್ಸಿಂಗ್ ಸೂಪರಿಂಟೆಂಡೆಂಟ್,
ಬಾಪೂಜಿ ಡೆಂಟಲ್ ಕಾಲೇಜ್ ಮತ್ತು ಆಸ್ಪತ್ರೆ, ದಾವಣಗೆರೆ.
ಇವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ
**ದುಃಖ ತಪ್ತ ಕುಟುಂಬ ವರ್ಗ**



॥ ಶ್ರೀ ಕೂಡಲ ಸಂಗಮೇಶ್ವರ ಪ್ರಸನ್ನ ॥

**ಭಾವಪೂರ್ಣ ಶ್ರದ್ಧಾಂಜಲಿ**



ಶ್ರೀ ದೇವರಮನಿ ಗುರುಪುತ್ರ (ಚಿನ್ನಿ)
ಜನನ : 02-02-1973 ಮರಣ : 30-11-2023

ದಿನಾಂಕ 30-11-2023 ನೇ ಗುರುವಾರ ಬೆಳಗಿನ ಜಾವ 1-30 ಗಂಟೆಗೆ ನನ್ನ ತಮ್ಮನಾದ
**ಶ್ರೀ ದೇವರಮನಿ ಗುರುಪುತ್ರ (ಚಿನ್ನಿ)**
(ಲಿಂ. ಶ್ರೀಮತಿ ಪಾರ್ವತಮ್ಮ ಶ್ರೀ ದೇವರಮನಿ ಮಹಾಲಿಂಗಪ್ಪನವರ ದ್ವಿತೀಯ ಪುತ್ರ)
ಲಿಂಗೈಕ್ಯರಾಗಿದ್ದು ಇವರ ಅಂತ್ಯಸಂಸ್ಕಾರವನ್ನು ಇಂದು ಸಂಜೆ ನೆರವೇರಿಸಲಾಯಿತು. ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 08-12-2023 ನೇ ಶುಕ್ರವಾರ ಮಧ್ಯಾಹ್ನ 12-00 ಗಂಟೆಗೆ, ಶ್ರೀ ದಾನಮ್ಮದೇವಿ ದೇವಸ್ಥಾನ ಆವರಣ, ದೊಡ್ಡಪೇಟೆ, ದಾವಣಗೆರೆ ಇಲ್ಲಿ ನೆರವೇರಿಸಲಿದ್ದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಪತ್ನಿ ಶ್ರೀಮತಿ ಮೀನಾಕ್ಷಿ ಮತ್ತು ಮಗ, ಶ್ರೀಮತಿ ಶ್ರೀ ದೇವರಮನಿ ಚನ್ನಬಸಪ್ಪ, ಸಹೋದರಿಯರು,
**ಅಜ್ಜಂಪುರಶೆಟ್ರು ವಂಶಸ್ಥರು, ದೇವರಮನಿ ವಂಶಸ್ಥರು ಹಾಗೂ ಬಂಧು-ಮಿತ್ರರು**


# ಪತ್ನಿ ಕೊಲೆ ಮಾಡಿದ ಪತಿಗೆ ಕಾರಾಗೃಹ ಶಿಕ್ಷೆ

ದಾವಣಗೆರೆ, ಡಿ.7- ಪತ್ನಿಯನ್ನು ಕೊಲೆ ಮಾಡಿದ ಆರೋಪಿಗೆ 6 ವರ್ಷ ಕಾರಾಗೃಹ ವಾಸ ಹಾಗೂ 10 ಸಾವಿರ ರೂ. ದಂಡ ವಿಧಿಸಿ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ವಿ. ವಿಜಯಾನಂದ ಅವರು ತೀರ್ಪು ನೀಡಿದ್ದಾರೆ.

ಹರಿಹರ ತಾಲ್ಲೂಕು ಉಕ್ಕಡಗಾತ್ರಿಯ ಗುತ್ಯಮ್ಮ ಅವರ ಮಗಳಾದ ಶೀಲಾ ಅವರನ್ನು ಗಂಡ ಬನ್ನಿಕೋಡು ಗ್ರಾಮದ ಮಾಗಾನಹಳ್ಳಿ ಕೆಂಚಪ್ಪ ಮದ್ಯಪಾನ ಮಾಡಿ ಕೊಲೆ ಮಾಡಿದ್ದಾನೆಂದು ದೂರು ದಾಖಲಿಸಿದ್ದರು. ಸರ್ಕಾರಿ ವಕೀಲ ಸತೀಶ್ ಕುಮಾರ್ ನ್ಯಾಯ ಮಂಡನೆ ಮಾಡಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಪನ್ನು ಹತ್ಯೆ ಸಂಚಿನ ತನಿಖೆಗೆ ಸಮಿತಿ**
ನವದೆಹಲಿ : ಸಿಖ್ ಪ್ರತ್ಯೇಕತಾವಾದಿ ಗುರು ಪಟ್ವಂತ್ ಸಿಂಗ್ ಪನ್ನು ಹತ್ಯೆಗೆ ಸಂಚು ನಡೆಸಿದ್ದರಲ್ಲಿ ಭಾರತದ ಸಂಪರ್ಕವಿದೆ ಎಂದು ಅಮೆರಿಕ ಹೇಳಿರುವ ಹಿನ್ನೆಲೆಯಲ್ಲಿ ತನಿಖಾ ಸಮಿತಿಯನ್ನು ರಚಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.ಈ ವಿಷಯ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ್ದಾಗಿದೆ ಎಂದೂ ಅವರು ತಿಳಿಸಿದ್ದಾರೆ.

**ಮರಣ ದಂಡನೆಗೆ ಗುರಿಯಾದವರ ಭೇಟಿ ಮಾಡಿದ ರಾಯಭಾರಿ**
ನವದೆಹಲಿ : ಕತಾರ್‌ನಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಭಾರತೀಯ ನೌಕಾ ದಳದ ಎಂಟು ಮಾಜಿ ಸಿಬ್ಬಂದಿಯನ್ನು ಭಾರತದ ರಾಯಭಾರಿ ಭೇಟಿ ಮಾಡಿದ್ದಾರೆ. ಮರಣ ದಂಡನೆ ಪ್ರಶ್ನಿಸಿ ಭಾರತ ಅರ್ಜಿ ದಾಖಲಿಸಿದ್ದು, ಎರಡು ಸುತ್ತಿನ ವಿಚಾರಣೆ ನಡೆದಿದೆ.

**ಮುಖ್ಯಮಂತ್ರಿಗಳ ಆಯ್ಕೆಗಾಗಿ ಬಿಜೆಪಿಯಿಂದ ವೀಕ್ಷಕರ ರವಾನೆ**
ನವದೆಹಲಿ : ಮಧ್ಯ ಪ್ರದೇಶ, ಛತ್ತೀಸ್‌ಘಡ ಹಾಗೂ ರಾಜಸ್ಥಾನಗಳ ಮುಖ್ಯಮಂತ್ರಿಗಳ ಆಯ್ಕೆಗಾಗಿ ಬಿಜೆಪಿ ಕೇಂದ್ರ ವೀಕ್ಷಕರನ್ನು ಶುಕ್ರವಾರ ರವಾನಿಸುವ ನಿರೀಕ್ಷೆ ಇದೆ. ವಾರಾಂತ್ಯದಲ್ಲಿ ನೂತನ ಮುಖ್ಯಮಂತ್ರಿಗಳ ಆಯ್ಕೆ ನಡೆಯುವ ಸಾಧ್ಯತೆ ಇದೆ.

**ತೆಲಂಗಾಣದ ಮುಖ್ಯಮಂತ್ರಿಯಾಗಿ ರೇವಂತ್ ರೆಡ್ಡಿ ಪ್ರಮಾಣ ವಚನ**
ಹೈದರಾಬಾದ್ : ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಎ. ರೇವಂತ್ ರೆಡ್ಡಿ ಅವರು ತೆಲಂಗಾಣದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

**ಚಂಡಮಾರುತ ಹಾನಿಗೆ ಪರಿಹಾರ : ಪ್ರಧಾನಿ ಸೂಚನೆ**
ನವದೆಹಲಿ : ಮಿಚೌಂಗ್ ಚಂಡಮಾರುತದಿಂದ ಆಗಿರುವ ಹಾನಿಗಾಗಿ ಆಂಧ್ರ ಪ್ರದೇಶಕ್ಕೆ 493.60 ಕೋಟಿ ರೂ. ಹಾಗೂ ತಮಿಳುನಾಡಿಗೆ 450 ಕೋಟಿ ರೂ.ಗಳನ್ನು ಎಸ್.ಡಿ.ಆರ್.ಎಫ್. ಮೂಲಕ ನೀಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗೃಹ ಸಚಿವಾಲಯಕ್ಕೆ ತಿಳಿಸಿದ್ದಾರೆ.

**ಐ.ಎನ್.ಡಿ.ಐ.ಎ. ಸಭೆಯಲ್ಲಿ ಸೀಟು ಹಂಚಿಕೆ ಪ್ರಮುಖ ವಿಷಯ**
ನವದೆಹಲಿ : ಪ್ರತಿಪಕ್ಷಗಳ ಐ.ಎನ್.ಡಿ.ಐ.ಎ. ಒಕ್ಕೂಟ ಡಿಸೆಂಬರ್ 17ರಿಂದ 20ರ ನಡುವೆ ಸಭೆ ನಡೆಸಲಿದ್ದು, ಈ ಸಂದರ್ಭದಲ್ಲಿ ಸೀಟು ಹಂಚಿಕೆ ಪ್ರಮುಖ ವಿಷಯವಾಗಿರಲಿದೆ ಎಂದು ಮೂಲಗಳು ತಿಳಿಸಿವೆ.

**ವಿವೊ ವಿರುದ್ಧ ಜಾರಿ ನಿರ್ದೇಶನಾಲಯದ ಆರೋಪ ಪಟ್ಟಿ**
ನವದೆಹಲಿ : ಚೀನಾದ ಸ್ಮಾರ್ಟ್ ಫೋನ್ ಉತ್ಪಾದಕ ಕಂಪನಿಯಾದ ವಿವೊ ಇಂಡಿಯಾ ಹಾಗೂ ಇತರರ ವಿರುದ್ಧ ಜಾರಿ ನಿರ್ದೇಶನಾಲಯವು ಅಕ್ರಮ ಹಣ ಪ್ರಕರಣದಲ್ಲಿ ಮೊದಲ ಆರೋಪ ಪಟ್ಟಿ ದಾಖಲಿಸಿದೆ.

**ಡ್ಯಾನಿಶ್ ಅಲಿ ವಿರುದ್ದದ ಮಾತಿಗೆ ಕ್ಷಮೆ ಯಾಚಿಸಿದ ಬಿಧುರಿ**
ನವದೆಹಲಿ : ಬಿ.ಎಸ್.ಪಿ. ಸಂಸದ ಡ್ಯಾನಿಶ್ ಅಲಿ ವಿರುದ್ಧ ಆಕ್ಷೇಪಾರ್ಹ ಮಾತುಗಳನ್ನಾಡಿದ ಕಾರಣಕ್ಕಾಗಿ ಬಿಜೆಪಿ ಸಂಸದ ರಮೇಶ್ ಬಿದೂರಿ ಅವರು ಲೋಕಸಭೆಯ ಶಿಸ್ತು ಸಮಿತಿ ಸಭೆಯಲ್ಲಿ ಕ್ಷಮೆ ಯಾಚಿಸಿದ್ದಾರೆ. ಉಭಯ ನಾಯಕರು ಸಮಿತಿ ಎದುರು ಪ್ರತ್ಯೇಕವಾಗಿ ಹಾಜರಾಗಿದ್ದರು.

**ಕದನ ವಿರಾಮದ ಅಧಿಕಾರ ಬಳಸಿದ ಗುಟೆರೆಸ್‌ಗೆ ಇಸ್ರೇಲ್ ತರಾಟೆ**
ಜೆರುಸಲೇಂ : ಹಮಾಸ್ ಹಾಗೂ ಇಸ್ರೇಲ್ ನಡುವೆ ಕದನ ವಿರಾಮಕ್ಕಾಗಿ ಬೇಡಿಕೆ ಮುಂದಿಟ್ಟು ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟೊನಿಯೊ ಗುಟೆರೆಸ್ ಅವರು ಅಪರೂಪದ ಅಧಿಕಾರ ಬಳಸಿಕೊಂಡಿದ್ದಾರೆ. ಈ ಕ್ರಮವನ್ನು ಇಸ್ರೇಲ್ ಖಂಡಿಸಿದ್ದು, ಇಂತಹ ಕ್ರಮ ವಿಶ್ವಶಾಂತಿಗೆ ಅಪಾಯಕಾರಿ ಎಂದು ಹೇಳಿದೆ.

## ಪಿಂಚಣಿ ಸಮಿತಿಯ ಪುನರ್‌ರಚನೆ

**(1ನೇ ಪುಟದಿಂದ)** ಹೇಳಿಕೆ ನೀಡಿರುವ ಕಂದಾಯ ಸಚಿವ ಕೃಷ್ಣ ಭೈರೇಗೌಡ, ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಬದಲು ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಕುರಿತು ರಚಿಸಲಾಗಿರುವ ಏಕಸದಸ್ಯ ಸಮಿತಿಯನ್ನು ಇನ್ನು 10 ದಿನಗಳಲ್ಲಿ ಪುನರ್ ರಚಿಸಲಾಗುತ್ತದೆ ಎಂದರು.

ಹೆಚ್ಚುವರಿ ಅಧಿಕಾರಿಗಳನ್ನು ಸೇರಿಸಿ ಇತರ ರಾಜ್ಯಗಳಲ್ಲಿ ಯಾವ ರೀತಿ ಒಪಿಎಸ್ ಜಾರಿ ಮಾಡಿದ್ದಾರೆ ಎಂದು ಅಧ್ಯಯನ ವರದಿ ಪಡೆದು, ಇರುವ ತಾಂತ್ರಿಕ ಸಮಸ್ಯೆ ಪರಿಹರಿಸಿ ಒಪಿಎಸ್ ಜಾರಿಗೆ ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಪಿಂಚಣಿಗೆ ಸಂಬಂಧಿಸಿದಂತೆ ಹಳೆಯ ಸಮಿತಿ ನಿಧಾನ ಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ಪ್ರಸ್ತಾಪಿಸಿದ್ದಕ್ಕೆ ಸಚಿವರು ಉತ್ತರಿಸಿದ್ದಾರೆ.

ಹಳೆಯ ಪಿಂಚಣಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಮೂರು ಸುತ್ತಿನ ಚರ್ಚೆ ನಡೆಸಲಾಗಿದೆ. ಈ ವಿಷಯದಲ್ಲಿ ತಾಂತ್ರಿಕ ತೊಡಕುಗಳಿವೆ ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.

ರಾಜಸ್ಥಾನ ಸರ್ಕಾರ ಹಳೆಯ ಪಿಂಚಣಿ ಯೋಜನೆ ಜಾರಿಗೆ ಆದೇಶ ಹೊರಡಿಸಿದೆ. ಆದರೆ, ರಾಜ್ಯ ಸರ್ಕಾರಗಳು ಈಗಾಗಲೇ ಎನ್.ಪಿ.ಎಸ್. ಯೋಜನೆಯಡಿ ಹಣ ಜಮಾ ಮಾಡಿವೆ. ಇದು ಕೇಂದ್ರದ ಭವಿಷ್ಯ ನಿಧಿಯಲ್ಲಿ ಸೇರ್ಪಡೆಯಾಗಿದೆ. ಇದನ್ನು ಆಯಾ ರಾಜ್ಯ ಸರ್ಕಾರಗಳಿಗೆ ಮರಳಿಸಬೇಕಾದ ಅಗತ್ಯವಿದೆ ಎಂದವರು ತಿಳಿಸಿದರು.

ರಾಜ್ಯಗಳಿಗೆ ಹಣ ವಾಪಸ್ ನೀಡುವ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹೀಗಾಗಿ, ತರಾತುರಿಯಲ್ಲಿ ಹಳೆ ಪಿಂಚಣಿ ಯೋಜನೆ ಜಾರಿಗೆ ತಂದಲ್ಲಿ, ಠೇವಣಿಯ ಅರ್ಧ ಹಣ ಎನ್.ಪಿ.ಎಸ್.ನಲ್ಲಿ ಉಳಿಯಲಿದೆ, ಇನ್ನರ್ಧ ಒ.ಪಿ.ಎಸ್.ಗೆ ಬರಲಿದೆ. ಇದು ಸಂಕೀರ್ಣ ವಿಷಯ ಎಂದು ಹೇಳಿದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಕೊನೆಯ ದಿನಗಳಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಲಾಗಿತ್ತು. ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುವ ಬಗ್ಗೆ ಕಾಂಗ್ರೆಸ್ ಪಕ್ಷ ಭರವಸೆ ನೀಡಿತ್ತು.

# ಉತ್ತಮ ಸಂಸ್ಕಾರ ಶಿಕ್ಷಣದ ಅವಿಭಾಜ್ಯ ಅಂಗ



ದಾವಣಗೆರೆ, ಡಿ. 7- ಉತ್ತಮ ಸಂಸ್ಕಾರ ಶಿಕ್ಷಣದ ಅವಿಭಾಜ್ಯ ಅಂಗ, ದೈಹಿಕ ಶಿಕ್ಷಕರು ಮಾತ್ರ ಶಾಲಾ ಮಕ್ಕಳಲ್ಲಿ ಇಂತಹ ವ್ಯಕ್ತಿತ್ವ ರೂಪಿಸುವ ಕೆಲಸ ಮಾಡಬಲ್ಲರು. ಮಕ್ಕಳಿಗೆ ದೈಹಿಕ ಶಿಕ್ಷಣದ ಜೊತೆ ಉತ್ತಮ ಸಂಸ್ಕಾರ ಕೊಟ್ಟು ಅವರ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸುವ ಕೆಲಸ ಮಾಡಬೇಕು. ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಜವಾಬ್ದಾರಿ ಹೆಚ್ಚಿದ್ದು ಮಕ್ಕಳನ್ನು ದೇಶ ನಿಷ್ಠೆಯ, ಕಾಯಕದಲ್ಲಿ ದೈವತ್ವ ಕಂಡು ದೇಶದ ಶ್ರೇಷ್ಠ ಪ್ರಜ್ಞಾವಂತ ಪ್ರಜೆಗಳನ್ನಾಗಿ ರೂಪಿಸಿ ತಾವೂ ಶ್ರೇಷ್ಠರಾಗಬೇಕು ಎಂದು ಭಾರತ ಸೇವಾದಳ ಜಿಲ್ಲಾಧ್ಯಕ್ಷ ಪ್ರೊ. ಹೆಚ್.ಚನ್ನಪ್ಪ ಪಲ್ಲಾಗಟ್ಟೆ ಅವರು ಕರೆ ನೀಡಿದರು.

ಭಾರತ ಸೇವಾದಳ ಭವನದಲ್ಲಿ ಭಾರತ ಸೇವಾದಳ, ಜಿಲ್ಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದಾವಣಗೆರೆ ಉತ್ತರ ವಲಯ ಇವರ ಸಹಯೋಗದಲ್ಲಿ ಇಂದು ಆಯೋಜಿಸಿದ್ದ ದೈಹಿಕ ಶಿಕ್ಷಣ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತಾಲ್ಲೂಕು ದೈಹಿಕ ಶಿಕ್ಷಣ ಅಧಿಕಾರಿ ಮಹಮ್ಮದ್ ಹುಸೇನ್ ಪೀರ್ ಅವರು ಮಾತನಾಡಿ, ದೈಹಿಕ ಶಿಕ್ಷಕರು ಮೊದಲು ತಾವು ಎಲ್ಲಾ ರೀತಿಯ ವ್ಯಾಯಾಮಕ್ಕೆ ಸಂಬಂಧಿಸಿದ ಎಲ್ಲಾ ಪರಿಕರಗಳನ್ನು ಬಳಸುವ ಸಾಮರ್ಥ್ಯ ಹೊಂದಬೇಕು ಮತ್ತು ಮಕ್ಕಳಿಗೆ ಉತ್ತಮ ತರಬೇತಿ ನೀಡುವ ಕುರಿತು ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು.

ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಕಾರ್ಯದರ್ಶಿ ಸಂತೋಷ್, ತಾಲ್ಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಹಾಲೇಶ್, ಹಿರಿಯ ಭಾರತ ಸೇವಾದಳದ ಸದಸ್ಯರಾದ ನಿವೃತ್ತ ಶಿಕ್ಷಕ ಬಸವರಾಜಪ್ಪ ಕೆ.ಪಿ., ಭಾರತ ಸೇವಾದಳ ಜಿಲ್ಲಾ ಸಮಿತಿಯ ಸದಸ್ಯ ಹೆಚ್. ಹನುಮಂತಪ್ಪ ಹಾಜರಿದ್ದರು.

ಜಿಲ್ಲಾ ಸಮಿತಿಯ ಶಿಕ್ಷಕ ಸದಸ್ಯ ಕೆ.ಟಿ. ಜಯ್ಯಪ್ಪ, ಟಿ.ಎಸ್.ಕುಮಾರಸ್ವಾಮಿ, ಡಾ.ಲಕ್ಷ್ಮಣ ಮತ್ತು ಭಾರತ ಸೇವಾದಳ ಜಿಲ್ಲಾ ನೂತನ ಸಂಘಟಕರಾದ ಫಕ್ಕೀರಗೌಡ ಅವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದರು.

ಸೇವಾದಳ ಸರ್ವ ಧರ್ಮ ಪ್ರಾರ್ಥನೆಯ ಬಳಿಕ ತಾಲ್ಲೂಕು ದೈಹಿಕ ಶಿಕ್ಷಕರ ಸಂಘದ ಕಾರ್ಯ ದರ್ಶಿ ಶಿಕ್ಷಕ ಎ.ಆರ್. ಗೋಪಾಲಪ್ಪ ಸ್ವಾಗತಿಸಿದರು.

## ಶಿಕ್ಷಣ ವಂಚಿತರಿಗೆ ಮಾತ್ರ ಸೌಲಭ್ಯ ಸಿಗಲಿ

**(1ನೇ ಪುಟದಿಂದ)** ಲಿಂಗಭೇದ, ವರ್ಣಭೇದ, ಜಾತಿ-ಧರ್ಮ ಭೇದ, ವಯೋಭೇದ, ಭಾಷಾ ಭೇದ, ಪ್ರಾಂತ ಭೇದ ಇವೆಲ್ಲವನ್ನೂ ಹನ್ನೆರಡನೇ ಶತಮಾನದಲ್ಲಿ ಶರಣರು ಬೇರು ಸಹಿತ ಕಿತ್ತು ಹಾಕಿದ್ದರು. ಶರಣರ ತತ್ವಗಳಲ್ಲಿ ಜಾತಿ ಭೇದಕ್ಕೆ, ಧರ್ಮ ಭೇದಕ್ಕೆ, ಕಲಹಕ್ಕೆ ಸ್ಥಾನವಿಲ್ಲ. ಆದರೆ ಇಂದು ನಾವಾಗಿಯೇ ಜಾತಿಗಳನ್ನು ಉಪ ಜಾತಿಗಳನ್ನು ಹುಟ್ಟುಹಾಕಿದ್ದೇವೆ. ಸಂಕೇತ, ವೇಷ ಭೂಷಣಗಳ ಮೂಲಕ ನಮ್ಮ ಜಾತಿಗಳನ್ನು ತೋರಿಸಿಕೊಳ್ಳಲಾರಂಭಿಸಿದ್ದೇವೆ ಎಂದರು.

ದೇವರು ಮನುಷ್ಯನನ್ನು ಸೃಷ್ಟಿಸಿದ. ಆದರೆ ನಾವೆಲ್ಲಾ ಸೇರಿ ಜಾತಿ, ಧರ್ಮಗಳನ್ನು ಸೃಷ್ಟಿಸಿ ವಿಂಗಡಿಸಿಕೊಂಡಿದ್ದೇವೆ. ಸಂವಿಧಾನದಲ್ಲಿಯೇ ಜಾತ್ಯತೀತ ರಾಷ್ಟ್ರ ಎಂದು ಘೋಷಣೆಯಾಗಿದ್ದರೂ, ಶಾಲೆಗೆ ಮಗುವನ್ನು ಸೇರಿಸುವಾಗ ಜಾತಿ ನಮೂದಿಸಬೇಕಾಗಿ ಬಂದಿರುವುದು ದುರ್ದೈವ. ಇಂತಹ ಜಾತಿ, ಸೂತಕದಿಂದ ಬಿಡುಗಡೆ ಹೊಂದಿದಾಗ ಮಾತ್ರ ನಾವು ವಿಶ್ವ ಭ್ರಾತೃತ್ವ ಸಾಧಿಸಬಹುದು ಎಂದು ಅವರು ಪ್ರತಿಪಾದಿಸಿದರು.

ಜಾತಿಯ ಸೂತಕ ನಿರ್ಮಿಸಿಕೊಂಡು ಸತ್ಯಕ್ಕೆ ಶರಣಾಗುವ ವ್ಯವಸ್ಥೆಯನ್ನು ದೂರ ಇಟ್ಟಿದ್ದೇವೆ. ಶಾಲೆ, ದೇವಸ್ಥಾನ, ಪ್ರಾರ್ಥನಾ ಮಂದಿರಗಳಲ್ಲೂ ಈ ಸತ್ಯವನ್ನು ಹೇಳುತ್ತಿಲ್ಲ. ಜಾತಿ ವಾದಿಗಳನ್ನು ಜ್ಞಾನಿಗಳನ್ನಾಗಿ ಪರಿವರ್ತಿಸುವ ಸಮಾಜ ನಿರ್ಮಾಣವಾಗು ವುದಾದರೂ ಎಂದು ? ಎಂದು ಅವರು ಪ್ರಶ್ನಿಸಿದರು.

ಪ್ರಸ್ತುತ ದಿನಗಳಲ್ಲಿ ಎಲ್ಲಿ ನೋಡಿದರೂ ಕಮ್ಯುನಲಿಸಂ, ಕಮರ್ಷಿಯಲಿಸಂ, ಟ್ರೆಡಿಷನಲಿಸಂ ನಡೆಯುತ್ತಿದೆ. ಇವುಗಳಿಂದ ಹೊರ ಬರಬೇಕಾದರೆ ಅಧ್ಯಾತ್ಮಿಕ ಶಿಕ್ಷಣದ ಅಗತ್ಯವಿದೆ. ಶರಣರ ಮೌಲ್ಯಗಳನ್ನು ಅರಿತು ಶ್ರೇಷ್ಟ ಹಾಗೂ ಸರಳ ಸಮಾಜ ನಿರ್ಮಾಣ ಮಾಡುವತ್ತ ಹೆಜ್ಜೆ ಹಾಕೋಣ. ಹನ್ನೆರಡನೇ ಶತಮಾನದ ಆದರ್ಶ ಜೀವನ ಅನುಕರಣೆ ಮಾಡೋಣ ಎಂದು ಕರೆ ನೀಡಿದರು.

### ಅಕ್ಕಮಹಾದೇವಿ ಮದುವೆ ಆಗಿರಲಿಲ್ಲ

**(1ನೇ ಪುಟದಿಂದ)** ಸಾಹಿತ್ಯದಿಂದ ಸಂಶೋಧಿಸಿ ನಿರ್ಮಿಸಿದ ಚಿತ್ರವಾಗಿತ್ತು. ನಂತರ ಈ ಚಿತ್ರ ದೂರದರ್ಶನದಲ್ಲಿ ಪ್ರಸಾರವಾಯಿತು. ಯೂ ಟ್ಯೂಬ್‌ನಲ್ಲಿ ಇಂದಿಗೂ ಅದನ್ನು ವೀಕ್ಷಿಸಹುದಾಗಿದೆ ಎಂದು ಹೇಳಿದರು.

ಅಕ್ಕಮಹಾದೇವಿ ಅವರದ್ದು ಪವಿತ್ರವಾದ ಜೀವನವಾಗಿತ್ತು. ಚರ್ಮದ ಚಲುವಿಗಾಗಿ ಮಾರು ಹೋದ ಕೌಶಿಕನನ್ನು ತಿರಸ್ಕರಿಸಿದ ಅವರು, ಉತ್ತಮ ರಸ್ತೆ, ವಾಹನಗಳಿಲ್ಲದ ಕಾಲದಲ್ಲಿಯೇ ಅರಣ್ಯದಲ್ಲಿ ಸಂಚರಿಸುತ್ತಾ, ಕಲ್ಯಾಣ ತಲುಪಿದ್ದರು ಎಂದು ರಾಜಋಷಿ ಅವರು ವಿವರಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

### ಭಿನ್ನಮತ ನಿವಾರಣೆಗೆ ಹೈಕೋರ್ಟ್ ಸಮಿತಿ

**(1ನೇ ಪುಟದಿಂದ)** ಹಾಗೂ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಗಳೂ ಇದ್ದಾರೆ.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಸೂಚನೆ ನೀಡಿದೆ. ಚಿಕ್ಕಮಗಳೂರಿನಲ್ಲಿ ವಕೀಲ ಪ್ರೀತಂ ಎಂಬುವವರಿಗೆ ಪೊಲೀಸರು ಥಳಿಸಿದ್ದಾರೆ ಎಂಬ ಪ್ರಕರಣ ಜಿಲ್ಲೆಯಲ್ಲಿ ಕಾನೂನು ಸಮಸ್ಯೆಗೆ ಕಾರಣವಾಗಿತ್ತು. ನಂತರ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಲಾಗಿದೆ.

ಡಿಸೆಂಬರ್ 9ರಂದು ಅಡ್ವೊಕೇಟ್ ಜನರಲ್ ಅವರ ಕಚೇರಿಯಲ್ಲಿ ಸಮಿತಿ ಸಭೆ ನಡೆಸಬೇಕು. ತನ್ನ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

ನವೆಂಬರ್ 30ರಂದು ವಕೀಲರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಆರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ. ಪೊಲೀಸರ ವಿರುದ್ಧ ಐದು ಪ್ರಕರಣಗಳನ್ನು ದಾಖಲಿಸಲಾಗಿದೆ.

# ಆರು ತಿಂಗಳಲ್ಲಿ ವೈದ್ಯರ 461 ಹುದ್ದೆಗಳ ಭರ್ತಿ



ಬೆಳಗಾವಿ, ಡಿ. 7 - ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ 461 ವೈದ್ಯರ ಹುದ್ದೆಗಳನ್ನು ಇನ್ನಾರು ತಿಂಗಳಲ್ಲಿ ಭರ್ತಿ ಮಾಡುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬೇಳೂರು ಗೋಪಾಲಕೃಷ್ಣ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸದ್ಯ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಿಸಿಕೊಂಡು ಸೇವೆ ನೀಡಲಾಗುತ್ತಿದೆ ಎಂದು ಹೇಳಿದರು. ಆರ್ಥಿಕ ಇಲಾಖೆ ಅನುಮತಿ ಪಡೆದು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ವೈದ್ಯರ ನೇಮಕಾತಿ ಮಾಡುವುದಾಗಿ ತಿಳಿಸಿದರು.

ವೈದ್ಯರ ಕೊರತೆ ನಿವಾರಿಸಲು ಎಂ.ಬಿ.ಬಿ.ಎಸ್ ಪೂರ್ಣಗೊಳಿಸಿದವರಿಗೆ ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸಲಾಗಿದೆ. ರಾಜ್ಯದಲ್ಲಿ ನಿಯಮಾನುಸಾರ 102 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸುವುದು ಬಾಕಿಯಿದೆ. ಹಂತ ಹಂತವಾಗಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್‌ಗೆ ಒಳಪಡಲು ಅನುಕೂಲವಾಗುವಂತೆ ಎ.ಬಿ.ಆರ್.ಕೆ. (ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ) ಯೋಜನೆಯಡಿ ಡಯಾಲಿಸಿಸ್ ಚಿಕಿತ್ಸೆಯನ್ನು ತರುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು.

ರಾಜ್ಯದಲ್ಲಿ ಈ ಹಿಂದೆ ಡಯಾಲಿಸಿಸ್ ಘಟಕಗಳನ್ನು ನಿರ್ವಹಿಸುತ್ತಿದ್ದ ಏಜೆನ್ಸಿ ಸಮರ್ಪಕವಾಗಿ ನಿರ್ವಹಣೆ ಮಾಡದ ಕಾರಣ ತೊಂದರೆಯಾಗಿದೆ. ತಂತ್ರಜ್ಞರಿಗೆ ಸಂಬಳ, ಪಿ.ಎಫ್. ಹಾಗೂ ಇ.ಎಸ್.ಐ.ಗಳನ್ನು ಏಜೆನ್ಸಿ ಭರಿಸಿಲ್ಲ. ಪದೇ ಪದೇ ತಂತ್ರಜ್ಞರು ಧರಣಿ ಮಾಡುತ್ತಿದ್ದರು. ಸರ್ಕಾರ ತಂತ್ರಜ್ಞರೊಂದಿಗೆ ಮಾತನಾಡಿ ಪಿ.ಎಫ್ ಹಾಗೂ ಇ.ಎಸ್.ಐ.ನ್ನು ಸರ್ಕಾರದಿಂದ ಭರಿಸುವ ಆಶ್ವಾಸನೆ ನೀಡಿದೆ ಎಂದು ಸಚಿವ ಗುಂಡೂರಾವ್ ಹೇಳಿದರು. ನಿರ್ಲಕ್ಷ್ಯ ತೋರಿದ ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಿ ದಂಡ ವಿಧಿಸಲಾಗಿದೆ. ಡಯಾಲಿಸಿಸ್ ಘಟಕಗಳ ನಿರ್ವಹಣೆಗೆ ಹೊಸದಾಗಿ ಟೆಂಡರ್ ಕರೆಯಲಾಗಿದೆ.

ಈಗಾಗಲೇ ಬೆಂಗಳೂರು, ಮೈಸೂರು ಹಾಗೂ ಬೆಳಗಾವಿ ವಿಭಾಗಗಳ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದ್ದು, ಶೀಘ್ರವೇ ಕಲಬುರ್ಗಿ ವಿಭಾಗದ ಟೆಂಡರ್ ಕೂಡ ಕರೆಯಲಾಗುವುದು. ಹೊಸ ಸಂಸ್ಥೆಯು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಿದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ರಾಜ್ಯಾದ್ಯಂತ ಇದ್ದ 168 ಡಯಾಲಿಸಿಸ್ ಘಟಕಗಳನ್ನು 219ಕ್ಕೆ ಏರಿಸಲಾಗಿದೆ. 649 ಇದ್ದ ಯಂತ್ರಗಳು 800ಕ್ಕೆ ಏರಿಕೆ ಆಗಿವೆ. 59 ತಾಲ್ಲೂಕುಗಳ ಪೈಕಿ 48 ತಾಲ್ಲೂಕುಗಳಲ್ಲಿ ತಾಲ್ಲೂಕು ಆರೋಗ್ಯ ಕೇಂದ್ರಗಳು ಇಲ್ಲ. ಹಾಗಾಗಿ 48 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯೇ ಡಯಾಲಿಸಿಸ್ ಘಟಕಗಳನ್ನು ತೆರೆಯಲಾಗಿದೆ.

ಹೊಸ ಸಂಸ್ಥೆ ನಿರ್ವಹಣೆಯ ಜವಬ್ದಾರಿ ಪಡೆಯುವವರೆಗೆ ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಡಯಾಲಿಸಿಸ್ ಘಟಕಗಳು ಕಾರ್ಯನಿರ್ವಹಿಸಲಿವೆ. ಹೊಸ ಟೆಂಡರ್‌ನಲ್ಲಿ ಏಕ ಬಳಕೆಯ ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಸ್ವಚ್ಛತೆ ಹಾಗೂ ನಿರ್ವಹಣೆ ಕಾರ್ಯಭಾರ ತಪ್ಪಲಿದೆ ಎಂದು ಸಚಿವ ದಿನೇಶ್ ಗುಂಡುರಾವ್ ಸ್ಪಷ್ಟಪಡಿಸಿದರು.

## ಅನಧಿಕೃತ ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ

**(1ನೇ ಪುಟದಿಂದ)** ಕೇಂದ್ರಗಳಿಗೆ ಭೇಟಿ ನೀಡಬೇಕು. ನಕಲಿ ವೈದ್ಯರು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿದ್ದರೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಖಾಸಗಿ ವೈದ್ಯಕೀಯ ಸಂಸ್ಥೆಗಳು ಕಡ್ಡಾಯವಾಗಿ ಕೆ.ಪಿ.ಎಂ.ಇ. ಕಾಯ್ದೆಯಡಿ ಅನುಮತಿ ಪಡೆಯಬೇಕು ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

## ಚಿಂತಕ ಸಾವರ್ಕರ್ ಚಿತ್ರ ತೆಗೆಯುವ ಪ್ರಸ್ತಾಪ ಇಲ್ಲ



ಬೆಳಗಾವಿ, ಡಿ. 7 – ಹಿಂದುತ್ವ ಚಿಂತಕ ವಿ.ಡಿ. ಸಾವರ್ಕರ್ ಅವರ ಚಿತ್ರವನ್ನು ಇಲ್ಲಿನ ವಿಧಾನಸಭೆಯ ಛೇಂಬರ್‌ನಿಂದ ತೆಗೆದು ಹಾಕುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಭಾವಚಿತ್ರದ ವಿಷಯದಲ್ಲಿ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತೇನೆ ಎಂದು ಹೇಳಿದರು. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸುವರ್ಣ ಸೌಧದಲ್ಲಿ ಸಾವರ್ಕರ್ ಭಾವಚಿತ್ರ ಅಳವಡಿಸಲಾಗಿತ್ತು. ಅದನ್ನು ಕಾಂಗ್ರೆಸ್ ಸರ್ಕಾರ ತೆಗೆದು ಹಾಕಲಿದೆ ಎಂಬ ವರದಿಗಳ ನಡುವೆ ಸ್ಪೀಕರ್ ಈ ಹೇಳಿಕೆ ನೀಡಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ನನಗೆ ಬಿಟ್ಟರೆ ಸಾವರ್ಕರ್ ಚಿತ್ರ ತೆಗೆದು ಹಾಕುತ್ತೇನೆ. ಆದರೆ, ಈ ಕ್ರಮ ತೆಗೆದುಕೊಳ್ಳುವ ಅಧಿಕಾರ ನನಗಿಲ್ಲ. ವಿಧಾನಸಭಾಧ್ಯಕ್ಷರು ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ. ಸಾವರ್ಕರ್ ಚಿತ್ರ ಅಳವಡಿಕೆ ಶಿಷ್ಟಾಚಾರಕ್ಕೆ ಅನುಗುಣವಾಗಿಲ್ಲ ಎಂದು ಕಾಂಗ್ರೆಸ್ ಶಾಸಕರು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಸಂವಿಧಾನಕ್ಕೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

# ಹೆಸರಾಯಿತು ಕರ್ನಾಟಕ, ಉಸಿರಾಗಲಿಲ್ಲ ಕನ್ನಡ



ದಾವಣಗೆರೆ, ಡಿ. 7-ಹೆಸರಾಯಿತು ಕರ್ನಾಟಕ, ಉಸಿರಾಗಲಿಲ್ಲ ಕನ್ನಡ ಎನ್ನುವಂತಾಗಿದೆ. ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ ಮಾತ್ರ ನೌಕರಿ ಸಿಗುತ್ತೇ, ಭವಿಷ್ಯವಿದೆ ಎಂಬ ಭ್ರಮೆಗೆ ನಾವೆಲ್ಲರೂ ಒಳಗಾಗಿದ್ದೇವೆ ಎಂದು ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಅಖಂಡ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕರ್ನಾಟಕಕ್ಕೆ ಮೈಸೂರು ರಾಜ್ಯವೆಂದು ಕರೆಯಲಾಗುತ್ತಿತ್ತು. ದೇವರಾಜ ಅರಸು ಆಡಳಿತಾವಧಿಯಲ್ಲಿ 'ಕರ್ನಾಟಕ' ಎಂದು ಮರು ನಾಮಕರಣ ಮಾಡಲಾಯಿತು. ಕನ್ನಡ ಮಾತನಾಡಿದಾಗ, ಪ್ರೀತಿಸಿದಾಗ, ಕಲಿತಾಗ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯವಿದೆ. ಇಲ್ಲದಿದ್ದರೆ ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಭಾಷೆ ತೊಂದರೆಗೆ ಒಳಗಾಗುತ್ತಿದೆ ಎಂಬ ಆತಂಕ ಎದುರಾಗಿದೆ ಎಂದರು.

ಪರಭಾಷಾ ವ್ಯಾಮೋಹದಿಂದ ಹೊರಬಂದು ಕನ್ನಡ ನಾಡಿನಲ್ಲಿ ಕನ್ನಡ ಉಳಿಸಲು ಕಂಕಣಬದ್ಧರಾಗಬೇಕಾಗಿದೆ ಎಂದು ಹೇಳಿದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಕನ್ನಡ ಭಾಷೆ ಏಕೆ ಉಳಿಯಬೇಕೆಂದರೆ ಮಾತೃಭಾಷೆ ನಮಗೆ ಸ್ವಾತಂತ್ರ್ಯವನ್ನು ಕೊಡುತ್ತದೆ. ಯೋಚನಾ ಲಹರಿಯನ್ನು ಬೆಳೆಸುತ್ತದೆ. ಕ್ರಿಯಾಶೀಲತೆ ಸಮಾಜದಲ್ಲಿ ಹೆಚ್ಚಾದಷ್ಟು ಅಭಿವೃದ್ಧಿ ಹೆಚ್ಚಾಗುತ್ತಾ ಹೋಗುತ್ತದೆ ಎಂದರು.

ಶೇ.70-80 ರಷ್ಟು ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿಯೇ ವ್ಯಾಸಂಗ ಮಾಡಿರುತ್ತಾರೆ. ರಾಜ್ಯದಲ್ಲಿ ನಡೆಯುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳು ಹೆಚ್ಚಾಗಿ ಆಂಗ್ಲಭಾಷೆಯಲ್ಲಿಯೇ ಇರುವುದರಿಂದ ವಿದ್ಯಾರ್ಥಿಗಳಿಗೆ ಕಷ್ಟವಾಗಿ ಪರಿಣಮಿಸುತ್ತದೆ. ಕನ್ನಡದಲ್ಲಿಯೇ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಬೇಕೆಂಬ ಆಶಯ ನನ್ನದಾಗಿದೆ ಎಂದು ಹೇಳಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಮಾಜಿ ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಟಿ. ಶಿವಕುಮಾರ್ ಮಾತನಾಡಿದರು. ರೈತ ಮುಖಂಡ ತೇಜಸ್ವಿ ವಿ. ಪಟೇಲ್ ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಪರ ಹೋರಾಟಗಾರ ನಾಗೇಂದ್ರ ಬಂಡೀಕರ್, ಕೆ.ಜಿ. ಶಿವಕುಮಾರ್, ಅವಿನಾಶ್ (ಅಭಿ), ಲಕ್ಷ್ಮಿದೇವಮ್ಮ, ಶೃತಿ ಇನಾಂದಾರ್, ಕೆ.ಎಸ್. ರೇವಣಸಿದ್ದಪ್ಪ, ಕೆ. ಜೈಮುನಿ, ಶಶಿಧರ್, ವೇದಿಕೆ ಕಾರ್ಯಾಧ್ಯಕ್ಷ ಎಸ್.ಜಿ. ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.




**ಕನಕ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ**
**ಚುನಾವಣೆ – 2023-2028**



ಆತ್ಮೀಯ ಬಂಧುಗಳೇ,
ದಿನಾಂಕ : 10-12-2023 ರಂದು ಭಾನುವಾರ ನಡೆಯಲಿರುವ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ. ಇದರ ಚುನಾವಣೆಗೆ ಈ ಕೆಳಕಂಡ ನಾವುಗಳು ನಿರ್ದೇಶಕರ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ಆದ ಪ್ರಯುಕ್ತ ತಾವುಗಳು ತಮ್ಮ ಅಮೂಲ್ಯವಾದ ಮತವನ್ನು ನಮ್ಮ ತಂಡಕ್ಕೆ ನೀಡಿ ಜಯಶೀಲರನ್ನಾಗಿ ಮಾಡಿ, ತಮ್ಮೆಲ್ಲರ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಬ್ಯಾಲೆಟ್ ನಮೂನೆ

**ಶ್ರೀ ಲೋಕಿಕೆರೆ ಸಿದ್ದಪ್ಪನವರ ತಂಡ**
ವಕೀಲರು

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಗುರುತು | ಚಿಹ್ನೆ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 |  ಚಂದ್ರಶೇಖರ್ ಬಿ. ಜಮ್ಮಳ್ಳಿ ಮೊ. : 99022 22722 | ಕ್ಯಾಮೆರಾ | ✇ |
| 6 |  ಚೌಡಪ್ಪ ಪಿ. ಮೊ. : 99457 05539 | ಬ್ಯಾಟ್ | ✇ |
| 7 |  ಜಯಪ್ಪ ಎಂ. ಬಳ್ಳಾರಿ ಮೊ. : 9036655407 | ಸೀಲಿಂಗ್ ಫ್ಯಾನ್ | ✇ |
| 8 | | | |
| 9 | | | |
| 10 | | | |
| 11 | | | |
| 12 |  ಶ್ರೀಮತಿ ಭಾಗ್ಯಮ್ಮ ಡಿ.ಬಿ. ದೀಟೂರು ಮಹಿಳಾ ಮೀಸಲಾತಿ ಮೊ. : 9980487019 | ಗ್ಯಾಸ್ ಸಿಲಿಂಡರ್ | ✇ |
| 13 |  ರುದ್ರಪ್ಪ ಹೆಚ್. ಎಂ. ಮೊ. : 9448247127 | ದ್ರಾಕ್ಷಿ ಗೊಂಚಲು | ✇ |
| 14 | | | |
| 15 | | | |
| 16 |  ಶಫೀ ಅಹ್ಮದ್ ಹಿಂದುಳಿ ವರ್ಗ 'ಬ' ಮೊ. : 9742913199 | ಹೂಕೋಸು | ✇ |
| 17 | | | |
| 18 |  ಸಂಗೇಗೌಡ ಎಸ್. (ರಾಜಣ್ಣ) ಮೊ. : 9036759261 | ಆಟೋರಿಕ್ಷಾ | ✇ |
| 19 |  ಸಕ್ರೆನಾಯ್ಕ್ ಪರಿಶಿಷ್ಟ ಜಾತಿ ಮೊ. : 9900637498 | ಪ್ರೆಶರ್ ಕುಕ್ಕರ್ | ✇ |
| 20 |  ಡಾ. ಸಿದ್ದಪ್ಪ ಕೆ. ಎಂಬಿಬಿಎಸ್, ಎಂಡಿ. ಮೊ. : 9986206226 | ಗಾಜಿನ ಲೋಟ | ✇ |
| 21 |  ಲೋಕಿಕೆರೆ ಸಿದ್ದಪ್ಪ ಟಿ.ಹೆಚ್. ವಕೀಲರು ಮೊ. : 9449684096 | ತೆಂಗಿನಕಾಯಿ | ✇ |
| 22 |  ಶ್ರೀಮತಿ ಸುಧಾ ಕೆ ಮಹಿಳಾ ಮೀಸಲಾತಿ ಮೊ. : 9481527290 | ಕಿರೀಟ | ✇ |

**ಮತದಾನ ದಿನಾಂಕ : 10-12-2023ನೇ ಭಾನುವಾರ**
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00 ರ ವರೆಗೆ
ಸ್ಥಳ : ಶ್ರೀಮತಿ ಸುಂದರಮ್ಮ ರಾಜನಹಳ್ಳಿ ಲಕ್ಷ್ಮಣ ಶೆಟ್ಟಿ ಮಹಾತ್ಮ ವಿದ್ಯಾಲಯ, (ಕಿರಿಯ ಪ್ರಾಥಮಿಕ ಶಾಲೆ), ಬಡಾವಣೆ ಪೊಲೀಸ್ ಠಾಣೆ ಎದುರು, ಸೀತಮ್ಮ ಕಾಲೇಜ್ ಹತ್ತಿರ, 1ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.

**ತಮ್ಮ ಸೇವಾಕಾಂಕ್ಷಿಗಳು :**
✦ ಲೋಕಿಕೆರೆ ಸಿದ್ದಪ್ಪ ಟಿ.ಹೆಚ್, ✦ ಸಂಗೇಗೌಡ ಎಸ್.
✦ ಚಂದ್ರಶೇಖರ್ ಬಿ. ✦ ಚೌಡಪ್ಪ ಪಿ. ✦ ಜಯಪ್ಪ ಎಂ.
✦ ಶ್ರೀಮತಿ ಭಾಗ್ಯಮ್ಮ ಡಿ.ಬಿ. ✦ ರುದ್ರಪ್ಪ ಹೆಚ್.ಎಂ. ✦ ಶಫೀ ಅಹ್ಮದ್
✦ ಸಕ್ರನಾಯ್ಡ್, ✦ ಡಾ. ಸಿದ್ದಪ್ಪ ಕೆ. ✦ ಶ್ರೀಮತಿ ಸುಧಾ ಕೆ.

# ಕೃಷಿ ಕ್ಷೇತ್ರದಲ್ಲಿ ಅಧಿಕ ಉದ್ಯೋಗ ಸೃಷ್ಟಿ ಮಾಡಬಹುದು : ಡಾ. ಹುಲ್ಲುನಾಚೇಗೌಡ



ದಾವಣಗೆರೆ. ಡಿ. 7 - ಕೃಷಿ ಕ್ಷೇತ್ರದಲ್ಲಿ ಅಧಿಕವಾಗಿರುವ ಉದ್ಯೋಗಗಳನ್ನು ಸೃಷ್ಟಿ ಮಾಡಬಹುದು. ರೈತರನ್ನು ತಾಂತ್ರಿಕ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದರೆ ಮಾತ್ರ ಕೃಷಿ ಕ್ರೇತ್ರದಲ್ಲಿ ಅಮೂಲಾಗ್ರ ಬದಲಾವಣೆ ಹಾಗು ಅಭಿವೃದ್ಧಿ ಪಡಿಸಬಹುದು ಎಂದು ಮೈಕ್ರೋಬಿ ಸಮೂಹ ಸಂಸ್ಥೆಗಳ ಛೇರ್ಮನ್ ಡಾ. ಕೆ.ಆರ್. ಹುಲ್ಲುನಾಚೇಗೌಡ ತಿಳಿಸಿದರು.

ಅವರು ನಗರದ ಕುವೆಂಪು ಕನ್ನಡ ಭವನದಲ್ಲಿ ಮೈಕ್ರೋಬಿ ಆಗ್ರೋಟೆಕ್ ಪ್ರೈವೇಟ್. ಲಿ. ಹಾಗು ಶ್ರೀ ಶಿವ ನಾರದಮುನಿ ಕೃಷಿ ಮಾಹಿತಿ ಮತ್ತು ಪರಿಕರ ಮಾರಾಟ ಕೇಂದ್ರದ ವತಿಯಿಂದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡುತ್ತಿದ್ದರು.

ಗ್ರಾಮೀಣ ಭಾಗದ ಯುವಕರನ್ನು ಕೃಷಿ ಉದ್ಯಮದತ್ತ ಸೆಳೆಯಬೇಕು. ಮಣ್ಣಿನ ಫಲವತ್ತತೆಯಿಂದ ಬೆಳೆದಿರುವ ಪದಾರ್ಥಗಳನ್ನು ಮಾರುಕಟ್ಟೆ ಯವರೆಗೂ ತಲುಪಿಸುವ ಡಿಜಿಟಲ್ ತಂತ್ರಜ್ಞಾನದವರೆಗೂ ನಾವು ರೈತರನ್ನು ಪ್ರೋತ್ಸಾಯಿಸುತ್ತೇವೆ. ಉದ್ಯೋಗ ಮೇಳಕ್ಕೆ ಬಂದ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿ ಮೊದಲ ಹಂತದಲ್ಲಿ 17 ಅಭ್ಯರ್ಥಿಗಳಿಗೆ ಉದ್ಯೋಗ ನೀಡಲಾಯಿತು ಎಂದು ತಿಳಿಸಿದರು.

ಮೈಕ್ರೋಬಿ ಫೌಂಡೇಶನ್ ಜಿಲ್ಲಾ ಸಂಚಾಲಕ ಮಹದೇವಪ್ಪ ದಿದ್ದಿಗೆ ಮಾತನಾಡಿದರು. ಕಾರ್ಯಕ್ರಮ ದಲ್ಲಿ ಚರಣ್ ನಾಯ್ಡು, ರವಿ ಯೋಗರಾಜ್, ವಿಶ್ವನಾಥ್, ಲಿಖಿತ್ ಜ್ಯೋತಿರ್ಮಯಿ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿ ಜ್ಞಾನದ ಅರಿವಿದ್ದರೆ ಉತ್ತಮ ಫಲಿತಾಂಶಕ್ಕೆ ನಾಂದಿ : ಅನಂತರಾಜು



ದಾವಣಗೆರೆ, ಡಿ. 7- ಶೈಕ್ಷಣಿಕ ಕಾಳಜಿಯೊಂದಿಗೆ ವಿದ್ಯಾರ್ಥಿಗಳಲ್ಲಿ ಜ್ಞಾನದ, ಪರಿಜ್ಞಾನದ ಅರಿವಿದ್ದರೆ ಮಕ್ಕಳ ಮುಂದಿನ ಉತ್ತಮ ಫಲಿತಾಂಶಕ್ಕೆ ನಾಂದಿ. ಶಿಕ್ಷಕ-ಶಿಕ್ಷಕಿಯರ ಜತೆಯಲ್ಲಿ ಪೋಷಕರೂ ಕೈಜೋಡಿಸಬೇಕಾಗಿದೆ ಎಂದು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಎ. ಅನಂತರಾಜು ಹೇಳಿದರು.

ದಾವಣಗೆರೆ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಮತ್ತು ಕೆಆರ್‌ಎಸ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ 2023-24 ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಿದ್ಧತಾ ಉಚಿತ ಕಾರ್ಯಾಗಾರವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಕೆಲವು ಮಕ್ಕಳಲ್ಲಿ ಸಾಮಾನ್ಯ ಜ್ಞಾನದ ಕೊರತೆಯಿಂದಾಗಿ ಶಿಕ್ಷಣಕ್ಕೆ ಧಕ್ಕೆಯಾಗುತ್ತಿದೆ. ಎಸ್ಸೆಸ್ಸೆಲ್ಸಿ ಹಂತ ಜೀವನದ ಮತ್ತು ಶಿಕ್ಷಣದ ಒಂದು ತಿರುವ. ಮಕ್ಕಳು ಈ ದಿಕ್ಕಿನಲ್ಲಿ ಇಚ್ಛಾಶಕ್ತಿಯಿಂದ, ಬದ್ಧತೆಯಿಂದ ಸಮಯ ಪ್ರಜ್ಞೆಯೊಂದಿಗೆ ತೊಡಗಿಸಿಕೊಂಡಾಗ ಮುಂದಿನ ಸಾಧನೆಗಳಿಗೆ ಪೂರಕ ಎಂದರು.


ಶಿಕ್ಷಣ ಸಂಯೋಜಕರಾದ ಡಾ. ಪ್ರತಿಮಾ ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಹೊಸ ತಂತ್ರಜ್ಞಾನದ ಭರಾಟೆಯಲ್ಲಿ ಮೊಬೈಲ್‌ಗಳ ಸಹವಾಸದೊಂದಿಗೆ ಮಕ್ಕಳ ಶೈಕ್ಷಣಿಕ ಕಾಳಜಿಗೆ ಕೊರತೆಯಾಗುತ್ತಿರುವುದು ವಿಷಾದದ ಸಂಗತಿ ಎಂದರು.

ಕಾಲೇಜಿನ ಉಪ ಪ್ರಾಚಾರ್ಯರಾದ ಸಿ. ಉಮೇಶ್ವರ, ಸಿಬಿಸಿ ಸಮಿತಿ ಅಧ್ಯಕ್ಷ ಎಂ.ಬಿ. ಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ರಾಜೇಶಚಾರಿ, ಸಮಾಜ ಸೇವಕ ಶ್ರೀಧರ ನಾಯಕ, ಯುವ ಪ್ರತಿಭಾವಂತ ಯುವ ಶಿಕ್ಷಕಿ ವಿದ್ಯಾಶೆಣ್ಯೆ ಮತ್ತಿತರರು ಉಪಸ್ಥಿತರಿದ್ದರು.

ರಾಮಪ್ರಸಾದ ಪೊನ್ನುಸ್ವಾಮಿ ಸ್ವಾಗತಿಸಿದರು. ಎಲ್.ಜಿ. ಲಿಂಗರಾಜಪ್ಪ ನಿರೂಪಿಸಿದರು. ಎಸ್. ಜಯಲಕ್ಷ್ಮಿ ವಂದಿಸಿದರು.

# ಮೊದಲ ಮಳೆಯ ಘಮಲಿನ ಹಸಿ ಕವನಗಳು

ಕಾವ್ಯವನ್ನೇ ಜೀವಿಸುತ್ತಿರುವ ದಾವಣಗೆರೆಯ ಕವಿ ಪಾಪುಗುರು ಅವರ ಎರಡನೇ ಕವನ ಸಂಕಲನವಿದು. ಮುಳ್ಳೆಲೆಯ ಮದ್ದು ಕವನ ಸಂಕಲನದ ಮೂಲಕ ಕಾವ್ಯಲೋಕದಲ್ಲಿ ಭರವಸೆ ಮೂಡಿಸಿದ್ದ ಈ ಕವಿ, ಹಲವು ವರ್ಷಗಳ ನಂತರ ಮಣ್ಣೇ ಮೊದಲು- ಕವನ ಸಂಕಲನ ಹಿಡಿದು ಸಹೃದಯರ ಮುಖಾಮುಖಿಯಾಗಿದ್ದಾರೆ.




**ನಾನು ಅತ್ತಿದ್ದು ನನ್ನವ್ವನಿಗಾಗಿ**
**ನನ್ನವ್ವನಿಗಾಗಿ**
**ಅವ್ವ**
**ನಾನು ಹೆಣ್ಣು**
**ಈ ಜಗತ್ತಿನಲ್ಲಿ ಯಾರಿಗೂ ಬಸಿರಾಗಲಾರೆ**
**ಮತ್ಯಾರಿಗೂ ಉಸಿರಾಗಲಾರೆ (ಲಿಂಗ ರಾಜಕಾರಣ)**

ಹೆಣ್ಣು ಇಂದು ಏನಾಗಿದ್ದಾಳೆ ಅನ್ನುವುದು ಎಲ್ಲರಿಗೂ ಗೊತ್ತಿದೆ. ಭ್ರೂಣದಿಂದ ಹಿಡಿದು ಮುದಿ ಅಜ್ಜಿಯ ವಯೋ ಹೆಣ್ಣಿನ ದೈಹಿಕ ಮತ್ತು ಸಾಮಾಜಿಕ ಸ್ಥಿತಿ ಶೋಚನೀಯ ಎಂಬುದನ್ನು ಕವಿ ಇಲ್ಲಿ ಎದೆ ತಟ್ಟಿ ಹೇಳುತ್ತಾರೆ.

**ಉಸಿರೇ ಬಲು ಭಾರ**
**ಬೇಕಿದ್ದರೆ ನೀರಿಗೆ ಬಿದ್ದು ನೋಡಿ**
**ತಳ ಸೇರಿಕೊಳ್ಳುತ್ತದೆ**
**ಉಸಿರು ನಿಂತ ಮೇಲೆ ದೇಹವೇ ತೇಲುತ್ತದೆ**
**ತರ್ಪಣದಂತೆ (ಬಾರದ ಉಸಿರು)**

ಅಪ್ಪನ ಸುಟ್ಟ ಬೂದಿ ನೀರಿಗೆ ಬಿಡುವಾಗಿನ ಉಮ್ಮಳಿಸಿದ ಬಿಕ್ಕುಗಳ ಕವಿ ಪದಮಾಲೆ ಮಾಡಿ ಓದುಗರೆದೆಗೆ ದಾಟಿಸಿ, ಮೌನ ನುಂಗಿ ನಿಲ್ಲುತ್ತಾರೆ. ದುಃಖ ಗಂಟಲಲ್ಲಿ ಗಿರಕಿ ಹೊಡೆಯುವಾಗ, ಉಸಿರು ಸರಾಗವಾಗಿ ಆಡದೇ ಹಠ ಹೂಡುತ್ತದೆ . ಅಂತಹ ಉಸಿರನ್ನು ಮತ್ತೆ ಮತ್ತೆ ಎದೆಗೆಳೆದುಕೊಂಡಾಗ ದೇಹವೋ ಮನಸೋ ಮಾತು ಕೇಳುತ್ತದೆ. ಆ ನಿಟ್ಟಿನಲ್ಲಿ ಪಾಪು ಕವಿತೆ ಓದುಗನನ್ನು ಕೈ ಕಟ್ಟಿ ನಿಲ್ಲಿಸುತ್ತದೆ!

ಕಾವ್ಯ- ಅನಾದಿ ಕಾಲದಿಂದಲೂ ಎದೆಯೊಳಗಣ ಅವ್ಯಕ್ತ ಮಾತುಗಳನ್ನು ಅಕ್ಷರದ ಚೌಕಟ್ಟಿನಲ್ಲಿ ಅಭಿವ್ಯಕ್ತಿಸುತ್ತಾ ತನ್ನ ಇರುವಿಕೆಯನ್ನು ಸಾಬೀತುಪಡಿಸುತ್ತಾ ಬಂದಿದೆ! ಸದ್ಯದ ಸ್ಥಿತಿಯಲ್ಲಿ ಕಾವ್ಯ ಕೈ ಹಿಡಿಯದು ಎಂಬ ಒಣ ಮಾತಿಗೆ ಪಾಪುಗುರು ಅಪವಾದವಾಗಿದ್ದಾರೆ. ತ್ರಿಲೋಕ ಸಂಚಾರಿಯಂತಹ ಈ ಕವಿ ಕಂಡುಂಡ ಸತ್ಯಗಳನ್ನು, ಜೊತೆಯಲ್ಲಿ ಎದುರಾದ ಜೀವನಾನುಭವಗಳನ್ನು ಕಾವ್ಯವಾಗಿಸಿ ಗೆಲ್ಲುತ್ತಾರೆ.

**ಅಂದಿನಿಂದ ಇಂದಿನವರೆಗೂ**
**ಈ ಬೆತ್ತಲೆಯ**
**ಅರಿವೆಗೆ ಸತ್ಯವಂತರು ಬೇಕಿದೆ**
**ಸಮಕ್ಷಮದ ಸಾಕ್ಷಿಗೆ**
**ಅಂತರಾತ್ಮದ ಆತ್ಮದ ಬೆಳಕಿಗೆ (ಬೆತ್ತಲೆ)**

ಕನ್ನಡ ಕಾವ್ಯ ಲೋಕದಲ್ಲಿ ಬೆತ್ತಲೆ ಕುರಿತು ಅನೇಕ ಕವಿಗಳು ಬರೆದಿದ್ದಾರೆ. ಬೆತ್ತಲೆಯೆಂಬ ಬಯಲಲ್ಲಿ ಅಥವಾ ಬಯಲೆಂಬ ಬೆತ್ತಲೆಯಲ್ಲಿ ಸಾಕ್ಷಾತ್ಕಾರವೆಂಬುದು ಅಂತರ್-ಧ್ಯಾನದ ವಸ್ತು. ಬಟ್ಟೆಯೊಳಗೆಲ್ಲರೂ ಬೆತ್ತಲೆ ಎಂಬ ಸತ್ಯ ಅರಿವಾಗುವಷ್ಟರಲ್ಲಿ ಜೀವನದ ಕೊನೆಯ ನಿಲ್ದಾಣದಲ್ಲಿ ನಿಂತಿರುತ್ತೇವೆ! ಅಂತಹ ಅಂತಿಮ ಸತ್ಯ ದರ್ಶನ ನೀಡುವ ಪಾಪುಗುರು ಒಮ್ಮೊಮ್ಮೆ ಅಧ್ಯಾತ್ಮವಾದಿಯಂತೆ ಕಂಡರೂ ಅಚ್ಚರಿಯಿಲ್ಲ! ಕಾವ್ಯದ ಹೊಳೆಯಲ್ಲಿ ಸದಾ ತೇಲುತ್ತಾ, ಈಜುತ್ತಾ, ಮುಳುಗುತ್ತಾ ಸಾಗುವ ಈ ಕವಿ ನೆಲದೊಡಲಿನ ಘಮದ ಕಾವ್ಯ ಕೊಟ್ಟಿದ್ದಾರೆ.

**ಅಚ್ಛೇ ದಿನ್ ಆಗಯಾ**
**ಎನ್ನುತ್ತಲೇ ಮುಗಿಲು ನೋಡಿದೆ**
**ಇದ್ದಕ್ಕಿದ್ದಂತೆ ಮೋಡ ಕಪ್ಪಾಗಿ**
**ಚಳಿಗಾಲದಲ್ಲಿ ಮಳೆ ಬಂತು**
**ಕಣದಲ್ಲಿ ರಾಶಿ ಮಾಡಿದ್ದ**
**ತೆನೆಗಳ ಮುಚ್ಚಲು ಓಡಿದೆ**
**ಎಡಕ್ಕೋ ಬಲಕ್ಕೋ ತಿಳಿಯಲಿಲ್ಲ (ವಾಸ್ತವ)**

ಕಾವ್ಯದಿಂದ ಸಾಮಾಜಿಕ ಬದಲಾವಣೆ ಸಾಧ್ಯ ಅನ್ನುವುದು ಇಂದಿನ ಕಾಲಕ್ಕೆ ಗುಮಾನಿಯ ಮಾತು. ಎದೆಯ ಹಾಡುಗಳ ಹಾಡಿ ಖಾಲಿಯಾಗುವ ಕವಿಗಳದು ಒಂದು ಗುಂಪು , ತಾನಿದ್ದ ಸಮಾಜವ ತನ್ನ ಮೂರನೇ ಕಣ್ಣಿಂದ ನೋಡುತ್ತಲೇ ಸಾರ್ವಕಾಲಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತಾ ಎದೆಕೊಡುವುದಿದೆಯಲ್ಲಾ..... ಅದು ನಿಜ ಕವಿಯ ನಿತ್ಯ ಕರ್ಮ. ಅದನ್ನೇ ಪಾಪುಗುರು ಇಲ್ಲಿ ಈ ಕವನದೊಂದಿಗೆ ಮಾಡಿದ್ದಾರೆ.

**ನನ್ನವಳ ಸಾಂತ್ವನಕ್ಕೆ**
**ಸಾಲಗಳು ಸರಿದು ನಿಂತಿವೆ**
**ಸಂಬಳ ಸಾಕಾಗಿಲ್ಲ**
**ಹಬ್ಬಕ್ಕೆ ಹಪ್ಪಳವಿಲ್ಲ ( ನಾನೇ...)**

ನೂರಾರು ನಿರೀಕ್ಷೆಗಳು ಒಮ್ಮೊಮ್ಮೆ ಒಂದೂ ಕೈಗೂಡದೇ ಹೋಗಬಹುದು. ಆದರೆ ಸತತ ಯತ್ನ ಮತ್ತು ನಾಳಿನ ಭರವಸೆಯ ಕೋಟೆ ಕವಿ ಮಾತ್ರ ಕಟ್ಟಬಲ್ಲ. ಬಡತನವೆನ್ನುವುದು ಹಿಡಿ ಕೂಳಿಗಷ್ಟೇ ಅಂದ ವರಕವಿ ಬೇಂದ್ರೆ, ಹೇಳಿ ಯಾವ ಕಾಲ? ಆ ಬಡತನವನ್ನೇ ಬಳಸಿದ್ದವರು ಅದಕು ಇದಕು ಎದಕೂ!

ಈ ಕವಿಯ ಸಾಲುಗಳು ಕೂಡಾ ಬಡತನವ ಹೆದರಿಸಲು ಹಣ ಬೇಕಿಲ್ಲ ; ಮನವರಿತ ಮಡದಿ ಮುಖ್ಯ ಅನ್ನುವ ತೆಳು ಕಾಗದದ ಅಂಚಿಗಿಂತಲೂ ಚೂಪಾದ ಸೂಕ್ಷ್ಮದಲ್ಲಿ ಕವಿ ಸಾಕ್ಷೀಕರಿಸಿದ್ದಾರೆ!

**ಬೇಡವೇ ಬೇಡ...**
**ಬತ್ತಿದ ಬಳ್ಳಿಗೆ ನೀರೆರೆದರೆ**
**ಬಿಳಿ ಹೂ ಬಿಡುವುದೇ ಗುರುನಾಥ?**
**ಸಾರ ಬೇಕೆಂದರೆ ಸಂಸಾರ ,**
**ಮರ ಮುಪ್ಪಾದರೂ ಹುಳಿ ಮುಪ್ಪೇ ಸೋಮನಾಥ?**
**ಇಲ್ಲಿ ಎಲ್ಲವೂ ಸಪ್ಪೆ ರಾಮನಾಥ**
**ನಿರರ್ಥಕವಾದರೂ ಮಣ್ಣೇ ಮೊದಲು...**
**ಮಣ್ಣೇ ಮೂಲವೂ ಅಷ್ಟೇ! (ಮಣ್ಣೇ ಮೊದಲು...)**

ಮಡಕೆ ಮಾಡುವೊಡೆ ಮಣ್ಣೇ ಮೊದಲು ಎಂದ ಅಣ್ಣ ಬಸವಣ್ಣ ನ ಮಾತು ಮರೆಯಲಾದೀತೇ? ಮಣ್ಣಿಲ್ಲದ ಜಗವ ಊಹಿಸಿಕೊಳ್ಳಲಾಗದು. ಜಗದ ಜೀವರಾಶಿಗಳಿಗೆಲ್ಲಾ ಮಣ್ಣು ಮೂಲ ಆಕರ. ಪಾಪುಗುರು ಅವರ ಈ ಕಾವ್ಯ ಲೋಕದಲ್ಲಿ ಮಣ್ಣಿನ ಗುಣವಿದೆ. ಜೀವನದ ಸಕಲ ಜಂಜಡಗಳ ಅನುಭವಿಸಿದ ನಂತರ ಹುಟ್ಟೋ



ಸಿಹಿ, ಹುಳಿ, ಸಪ್ಪೆ, ಉಪ್ಪಿನ ಗುಣ-ಗ್ರಹಿಕೆಗೆ ಅಕ್ಷರ ರೂಪ ಕೊಟ್ಟು ಅನೇಕ ಪದ್ಯಗಳಲ್ಲಿ ಗೆದ್ದಿದ್ದಾರೆ. ಮೊದಲ ಮಳೆಯ ಘಮಲಿನ ಹಸಿ ಕವನಗಳು ಓದುಗರ ಮನದಲ್ಲಿ ಮನೆ ಮಾಡಿ ನಿಲ್ಲುತ್ತವೆ.

ಇಲ್ಲಿನ ಅನೇಕ ಕವನಗಳಲ್ಲಿ ಅವ್ವ ಮಾತಾಡಿದ್ದಾಳೆ, ಮಣ್ಣು ಘಂ ಎಂದಿದೆ, ಸಂಕಟಗಳು ಮೈ ಮುರಿದಿವೆ, ಒಂಟಿತನ ಕಾಲ್ಕೆರೆದಿದೆ, ರಕ್ತದ ಕಲೆ ಅಲ್ಲಲ್ಲಿದೆ, ಮೌನ ಟೂ ಬಿಟ್ಟಿದೆ, ಬದುಕೆಂಬ ಈರುಳ್ಳಿ ಸಿಪ್ಪೆ ಒಂದೊಂದೇ ಕಳಚಿ ಮೈದೆರೆದಿದೆ.

ಯಾರಿಗೂ ಯಾವುದೂ ಶಾಶ್ವತವಲ್ಲ. ಏನೇ ಬರೆದರೂ, ಹೇಗೇ ಬದುಕಿದರೂ, ಎಷ್ಟೇ ಗಳಿಸಿದರೂ ನಮ್ಮ ಒಳಗೊಂದು ಆತ್ಮಧ್ಯಾನ, ಸಾರ್ಥಕಭಾವ, ಸಮಾಜದೆಡೆಗಿನ ತಣ್ಣನೆಯ ದೃಷ್ಟಿ ಇಟ್ಟುಕೊಂಡಿದ್ದಾಗ ಕವಿಗಿಂತ ಮನುಜನಾಗಲು ಸಾಧ್ಯ. ಆ ಸಾಧ್ಯತೆ ಪಾಪುಗುರು ಅವರಿಗೆ ದಕ್ಕಿದೆ.

ಕವಿತೆಯ ಇನ್ನೊಂದು ವಿಶೇಷತೆ ಏನೆಂದರೆ ಉಪಯೋಗ ಮತ್ತು ಅನುಭವವನ್ನು ನೀಡುವುದು - ಹಂಚಿಕೊಳ್ಳುವುದು ಅಂಥ. ಕವಿತೆಯಲ್ಲಿ ವ್ಯಕ್ತವಾಗುವ ಮನುಷ್ಯ ಪ್ರೀತಿಯ ಸಂದೇಶಗಳಿಂದ ಜೀವನದಲ್ಲಿ ಪ್ರತಿ ಮನುಷ್ಯ ಸಂಸ್ಕಾರವನ್ನು ಪಡೆಯುವುದರ ಜೊತೆಗೆ ಕಾವ್ಯದೊಂದಿಗೆ ಮಾನಸಿಕವಾಗಿ ಅನುಸಂಧಾನ ಮಾಡುವುದು ಹೌದು. ಹಾಗಾಗಿ ಕವಿಗಿಂತ ಕವಿತೆ ಆಪ್ತವಾಗುತ್ತದೆ. ಹಾಗೇ ಕವಿತೆ ಏಕಮುಖವಾಗದೆ ಬಹುಮುಖವಾಗಿ ಓದುಗ ಕೇಳುಗರ ನಡುವೆ ಸಮಾಜಮುಖಿಯಾಗಿ ಉಳಿಯಲು, ಬೆಳೆಯಲು ಕಾರಣವಾಗುತ್ತದೆ.

**ನಿನ್ನ ವಾಸನೆಯೇ ಅತ್ತರ್**
**ಅದು ಸುರಿಸುವ ಪರಿಮಳಕೆ**
**ಅಮಲೇರಿರುವೆ ಇನ್ನೇನು ಬೇಕು**
**ಮಧು ಬಟ್ಟಲು ಹಿಡಿದು ನಿಂತ**
**ನೀನೊಬ್ಬಳೇ ಸಾಕು (ನೀನೊಬ್ಬಳೇ ಸಾಕು)**

ಎದೆಯ ಹೊಳೆಯಲ್ಲಿ ಸಣ್ಣ ಹಾಯಿದೋಣಿ ತೇಲಿಸುವ ಇಂತಹ ಕಾವ್ಯ ಸಾಲುಗಳು ಸಂಕಲನದ ಮಧ್ಯ ಸಹೃದಯನೆದೆಗೆ ಬಂದಪ್ಪಳಿಸುತ್ತವೆ.

ಒಲವ ಕಾವ್ಯದರಗಿಣಿ ಜೊತೆಯಲ್ಲಿ ಕವಿ ಮುದ್ದಾಗಿ ಮಾತಾಡಿದ ಭಾವ ಕಾವ್ಯವಾಗಿ ಅರಳಿದೆ. ಕವಿ ಇನ್ನೂ ಕಾವ್ಯದ ಹಾದಿಯಲ್ಲಿ ಹಿಂದಿನ ಕಾವ್ಯದ ಹೊತ್ತಿಗೆ ಹಿಡಿದು ಬರಿಗಾಲಲ್ಲಿ ನಡೆಯಬೇಕಿದೆ. ಹಾದಿಗೆ ಎದುರಾಗುವ ಅಗಣಿತ ಹಳೆಯ ಕವಿಗಳ ಮೈಲಿಗಲ್ಲುಗಳ ಒಳ ನೋಟಗಳನ್ನು ಕಣ್ತುಂಬಿಸಿ ಕೊಳ್ಳಬೇಕಿದೆ. ಮುಂಬರುವ ಕಾವ್ಯದ ಹುಡುಕಾಟದಲ್ಲಿ ಪಾಪುಗುರು ಎಂಬ ಪ್ರೀತಿಯ ಕವಿ ಹೊಸ ಹೊಸ ಹೊಳಹುವಿನೊಂದಿಗೆ ಕಾವ್ಯಾಸಕ್ತರನ್ನು ಖಂಡಿತವಾಗಿಯೂ ಎದುರುಗೊಳ್ಳಬಲ್ಲರೆಂಬುದಕ್ಕೆ ಈ ಕೃತಿ ಬಹಳ ಕಡೆ ಕಾಡಿ ಸಾಕ್ಷಿ ನೀಡುತ್ತದೆ. ಈ ಕವಿಗೆ ಕಾವ್ಯದ ಸ್ವಾಗತ ಸದಾ ಇರುತ್ತೆ ಅನ್ನುವ ಭರವಸೆ ನೀಡುತ್ತಾ , ಅವರಿಂದ ಇನ್ನೂ ಉತ್ತಮೋತ್ತಮ ಕಾವ್ಯ ಕೃತಿ ರತ್ನಗಳು ಮೂಡಿಬರಲೆಂಬ ಆಶಯದೊಂದಿಗೆ.........

ಶುಭ ಹಾರೈಸುತ್ತೇನೆ.

**-ಸಂತೆಬೆನ್ನೂರು ಫೈಜ್ನಟ್ರಾಜ್**, ಸಂತೇಬೆನ್ನೂರು

# ಖೋ-ಖೋ : ಎಸ್‌ಎಲ್ ಕಾಲೇಜಿನ ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ

ದಾವಣಗೆರೆ, ಡಿ.7- ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಶ್ರೀ ಸಿದ್ದಗಂಗಾ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಹೊನಲು ಬೆಳಕಿನ ಖೋ-ಖೋ ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಜಿಲ್ಲೆಯ ತಂಡ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ.

ನಗರದ ಎಸ್. ಎಲ್ ಪದವಿ ಪೂರ್ವ ಕಾಲೇಜಿನ ಆರು ವಿದ್ಯಾರ್ಥಿಗಳು ಭಾಗವಹಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಅಲ್ಲದೇ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಧನುಶ್ರೀ ತೃತೀಯ ಸ್ಥಾನ ಪಡೆದಿರುತ್ತಾರೆ.

ನಿಖಿಲ್ ಬೆಸ್ಟ್ ಅಟ್ಯಾಕರ್, ಹಾಗೂ ಹುಲಿಗೆಪ್ಪ ಬೆಸ್ಟ್ ಆಲ್ ರೌಂಡರ್ ಆಗಿ ಆಯ್ಕೆಯಾದರು.

ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯದರ್ಶಿ ಎಲ್. ಭರತ್, ಆಡಳಿತಾಧಿಕಾರಿ ಸೋಮಶೇಖರ್ ಕಿಚಡಿ ಮತ್ತು ಪ್ರಾಚಾರ್ಯ ಕೆ.ಹನುಮಂತಪ್ಪ ಅಭಿನಂದಿಸಿದ್ದಾರೆ.



# ಹಡಗಲಿ : ಡಾ. ಬಿ.ಆರ್.ಅಂಬೇಡ್ಕರ್‌ಗೆ ಗೌರವಾರ್ಪಣೆ

ಹಡಗಲಿ, ಡಿ.7 - ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ರವರ 67ನೇ ಮಹಾಪರಿನಿರ್ವಾಣ ಪುಣ್ಯ ನಮನದ ನಿಮಿತ್ತ ಅಂಬೇಡ್ಕರ್ ಸರ್ಕಲ್‌ನಲ್ಲಿರುವ ಪ್ರತಿಮೆಗೆ ತಾಲ್ಲೂಕು ಆಡಳಿತದಿಂದ ಗೌರವಾರ್ಪಣೆ ಜರುಗಿತು.

# ಮುಂದಿನ ಬಜೆಟ್‌ನಲ್ಲಿ ಅದ್ಭುತ ಘೋಷಣೆಗಳಿಲ್ಲ : ನಿರ್ಮಲಾ ಸೀತಾರಾಮನ್

ನವದೆಹಲಿ, ಡಿ. 7 -ಮುಂಬರುವ ಫೆಬ್ರವರಿ 1ರ ಬಜೆಟ್‌ನಲ್ಲಿ ಯಾವುದೇ ಅದ್ಭುತ ಘೋಷಣೆಗಳು ಇರುವುದಿಲ್ಲ. ಅದು ಕೇವಲ ಲೋಕಸಭಾ ಚುನಾವಣೆಗೆ ಮುಂಚಿನ ಲೇಖಾನುದಾನ ಆಗಿರಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

2024-25ರ ಸಾಲಿನ ಪೂರ್ಣ ಬಜೆಟನ್ನು ಮುಂದಿನ ವರ್ಷ ಜುಲೈನಲ್ಲಿ ಹೊಸ ಸರ್ಕಾರ ಮಂಡಿಸಲಿದೆ ಎಂದು ಸೀತಾರಾಮನ್ ಹೇಳಿದ್ದಾರೆ. ಸಿ.ಐ.ಐ. ಗ್ಲೋಬಲ್ ಎಕನಾಮಿಕ್ ಪಾಲಿಸಿ ಫೋರಂ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ನಾನೇನೂ ಗುಟ್ಟು ಬಿಟ್ಟುಕೊಡುವುದಿಲ್ಲ. ಆದರೆ, ಫೆಬ್ರವರಿ 1, 2024ರ ಬಜೆಟ್ ಕೇವಲ ಲೇಖಾನುದಾನ ಆಗಿರಲಿದೆ. ಆ ವೇಳೆಗೆ ನಾವು ಚುನಾವಣಾ ಮನೋಭಾವದಲ್ಲಿರುತ್ತೇವೆ ಎಂದು ಸಚಿವೆ ತಿಳಿಸಿದ್ದಾರೆ.

ನೂತನ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಮಾಡಬೇಕಾದ ಖರ್ಚುಗಳಿಗೆ ಮಾತ್ರ ಬಜೆಟ್ ಮಂಡಿಸಲಾಗುವುದು. ಅದರಲ್ಲಿ ಯಾವುದೇ ಅದ್ಭುತ ಘೋಷಣೆಗಳು ಇರುವುದಿಲ್ಲ. ಹೊಸ ಸರ್ಕಾರ ರಚನೆಯಾಗಿ ಜುಲೈ 2024ರಲ್ಲಿ ಪೂರ್ಣ ಬಜೆಟ್ ಮಂಡಿಸುವವರೆಗೂ ನೀವು ಕಾಯಬೇಕಾಗುತ್ತದೆ ಎಂದವರು ಹೇಳಿದ್ದಾರೆ. ಲೇಖಾನುದಾನದಲ್ಲಿ ದೊಡ್ಡ ಘೋಷಣೆಗಳನ್ನು ಮಾಡುವುದರ ಮೇಲೆ ಯಾವುದೇ ನಿರ್ಬಂಧ ಇಲ್ಲ. ಆದರೆ, ಹಿಂದಿನಿಂದಲೂ ಸರ್ಕಾರಗಳು ಲೇಖಾನುದಾನದ ಮೇಳೆ ಪ್ರಮುಖ ನೀತಿಗಳನ್ನು ಘೋಷಿಸುವುದಿಲ್ಲ.

# ಮಠದ ಅಧಿಕಾರ ಮರಳಿ ಪಡೆದ ಶರಣರು

(1ನೇ ಪುಟದಿಂದ) ಬಿಡುಗಡೆಯಾದ ಬೆನ್ನಲ್ಲೇ ಮಠದ ಅಧಿಕಾರಕ್ಕಾಗಿ ಹೈಕೋರ್ಟ್ ಮೊರೆ ಹೋಗಿದ್ದು, ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ಅಧಿಕಾರ ಹಸ್ತಾಂತರಿಸುವಂತೆ ಚಿತ್ರದುರ್ಗದ ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ಗೆ ಸೂಚಿಸಿತ್ತು. ಅದರಂತೆ ಇದೀಗ ನ್ಯಾಯಾಧೀಶರು ಅಧಿಕಾರ ಹಸ್ತಾಂತರಿಸಿದ್ದಾರೆ.


**ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಪೂರ್ವ 30x45 ಡುಪ್ಲೆಕ್ಸ್, ತರಳಬಾಳು ಬಡಾವಣೆ ದಕ್ಷಿಣ 30x60 ಡುಪ್ಲೆಕ್ಸ್, ಜೆ.ಹೆಚ್. ಪಟೇಲ್ ಬಡಾವಣೆ ಉತ್ತರ 30x50, ಸಿದ್ದವೀರಪ್ಪ ಬಡಾವಣೆ ಪೂರ್ವ 30x40 ಮೇಲೆ-ಕೆಳಗೆ.
ಐಗೂರು ವಿಜಯಕುಮಾರ
99457 02495

**ಕಾರ್ನರ್ ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ ಪೂರ್ವ-ದಕ್ಷಿಣ 44x60, ಶಿವ-ಪಾರ್ವತಿ ಬಡಾವಣೆ ಪೂರ್ವ-ದಕ್ಷಿಣ 55x60, ಹಳೇ ಬನಶಂಕರಿ ಬಡಾವಣೆ ಪೂರ್ವ-ಉತ್ತರ 40x50, ಪೂರ್ವ-ದಕ್ಷಿಣ 40x65.
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕೆ**
ಆಂಜನೇಯ ಬಡಾವಣೆಯಲ್ಲಿ ಉತ್ತರ ಮುಖದ 30x55.5 ಅಳತೆ ಸೈಟ್
ಕಿರಣ್ ಭೂಸನೂರ್ (ಏಜೆಂಟ್)
97315-63409, 98440-63409
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x35 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತದಲ್ಲಿ 30x40 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕರಿ - ಬಾಡಿಗೆಗಿದೆ**
ಬೇಕರಿ ಉತ್ಪನ್ನಗಳನ್ನು ಮಾಡುವ, ಕುಕ್ಕಿಂಗ್ ಮಷಿನ್, ಓವನ್, ಜನರೇಟರ್, ಹಿಟ್ಟು ಕಲಸುವ ಯಂತ್ರಗಳೊಂದಿಗೆ ಜಾಗ ಸಹಿತ ಬಾಡಿಗೆಗಿದೆ. ಸಂಪರ್ಕಿಸಿ :
94491-76944, 90084-94427

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್ ಪೂರ್ವ 40x60 ಡುಪ್ಲೆಕ್ಸ್, ದಕ್ಷಿಣ 30x40 ಡುಪ್ಲೆಕ್ಸ್, ಎಸ್.ಎಸ್. 'ಎ' ಬ್ಲಾಕ್ ಪಶ್ಚಿಮ 30x50 ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 ಡುಪ್ಲೆಕ್ಸ್.
ಐಗೂರು ವಿಜಯಕುಮಾರ
99457 02495

**ಮನೆ ಬಾಡಿಗೆಗೆ ಇದೆ**
ವಿನೋಬನಗರ 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಶಂಭುಲಿಂಗ ಟೆಂಪಲ್ ಎದುರು ಮೊದಲನೇ ಮಹಡಿಯಲ್ಲಿ, 2 ಬೆಡ್ ರೂಂ ಮುನ್ಸಿಪಲ್ ಹಾಗೂ ಬೋರ್ ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
98804 38541, 89041 34197

**ಹೆಣ್ಣು ನಾಯಿ ಮರಿ ಮಾರಾಟಕ್ಕಿದೆ**
Shihtzu (ಶಿಹ್‌ತ್ಸು)
ಹೆಣ್ಣು ನಾಯಿ ಮರಿ ಮಾರಾಟಕ್ಕಿದೆ.
ಡಿಸಿಎಂ ಟೌನ್ ಶಿಪ್, ದಾವಣಗೆರೆ.
96631 66427

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ.
ಸಂಪರ್ಕಿಸಿ:
08192 254736

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
ಪರಿಮಳ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
94482 72734

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
Marketing ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
95380 52666, 88841 13358

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**WANTED**
1) Front Office Excutive
2) Lab - Technologist
3) Marketing Excutive
Contact : Mithra Diagnostic Laboratory, Behind Vishweshwaraiah Park, Davanagere.
9844326560

**WANTED LADY TEACHER**
BA., B.ED., HINDI
CONTACT :
95356 10817

**COSDERM HAIR & SKIN CARE WELLNESS CENTRE DAVANAGERE**
URGENTLY STAFF REQUIRED
Counsellor, Marketing manager, Nurse's, Therapist (Male, Female), House keeping (Male, Female), Dietitian
for more information
76192-57443, 81975-72499

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಮೆಗಾ ಮಾರ್ಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ ಮಧ್ಯಾಹ್ನ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇರುತ್ತದೆ (ಸಂಬಳ-10000)
81340 34264, 81975 17215

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

**ಬೇಕಾಗಿದ್ದಾರೆ**
ಲಾಡ್ಜ್‌ಗೆ ಹಗಲು ಪಾಳೆಯಕ್ಕೆ ಸೂಪರ್‌ವೈಸರ್ ಮತ್ತು ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ದಾವಣಗೆರೆ-2.
Only officials
97405 69252

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**Site For Sale**
30x40 North West Corner, Behind SS Hi-Tech Hospital, Davangere.
96069 04902

**ಶ್ರೀ ಸಾಯಿಬಾಬಾ ಬೋರ್‌ವೆಲ್**
350ರಿಂದ 450ರ ವರೆಗೂ ಕೊರೆಯಬಹುದು. ಮನೆ ಒಳಗೆ / ಮನೆ ಹೊರಗೆ. ದಾವಣಗೆರೆ.
99640 78484, 95906 15776

**ಗಲ್ಪಿ ಚಹಾ ಮಾರಾಟಕ್ಕಿದೆ**
(FRANCHISE)
ದಾವಣಗೆರೆ
99026 29958

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
ಗಿರೀಜ - ಮೇಕಪ್ ಆರ್ಟಿಸ್ಟ್
94817 76305

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Finance Advisor**
Full Times Job's Female.
Job Role Telecaller
Work time : 9.30 AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96326 11005

**WANTED**
* Salesman * Sales Girls * Helpers
Contact : Gangavathi Silk Saree Center
Binny Company Road, Davangere - 577001

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**ಕಮರ್ಷಿಯಲ್ ಬಳಕೆಗೆ ಮನೆ ಬಾಡಿಗೆಗೆ / ಲೀಸ್‌ಗೆ ಇದೆ**
ಸರಸ್ವತಿ ನಗರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಮನೆ, ಆಫೀಸ್, ಕ್ಲಿನಿಕ್, ಸರ್ವೀಸ್ ಸೆಂಟರ್ ಇನ್ನಿತರೆ ಕಮರ್ಷಿಯಲ್ ಬಳಕೆಗೆ ಬಾಡಿಗೆ / ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ.
98444 97008, 63638 41943

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ :
ಮಧ್ಯಾಹ್ನ 12 ರಿಂದ 10ರವರೆಗೆ.
95388 96927

**ಸುಸಜ್ಜಿತ ಹೋಟೆಲ್ ಕೊಡುವುದಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ. ( ಕಟ್ಟಡ ಹೊರತುಪಡಿಸಿ)
ಸಂಪರ್ಕಿಸಿ: 77600 05504 / 99864 45843
Whatsapp : 8105676876

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

# ನಗರದಲ್ಲಿ ಇಂದಿನಿಂದ ಶ್ರೀ ಪಾಂಡುರಂಗ ವಿಠಲ ರುಖುಮಾಯಿ ದಿಂಡಿ ಮಹೋತ್ಸವ



ದಾವಣಗೆರೆ, ಡಿ. 7- ಶ್ರೀ ನಾಮದೇವ ಸಿಂಪಿ ಸಮಾಜ ಹಾಗೂ ವಿವಿಧ ಅಂಗ ಸಂಸ್ಥೆಗಳ ಸಹಯೋಗದಲ್ಲಿ ನಾಳೆ ದಿನಾಂಕ 8, 9 ಮತ್ತು 10 ರಂದು ಮೂರು ದಿನಗಳ ಕಾಲ ನಗರದ ಎಸ್‌ಕೆಪಿ ರಸ್ತೆಯಲ್ಲಿನ ಶ್ರೀ ವಿಠಲ್ ಮಂದಿರ ಹಾಗೂ ದೊಡ್ಡಪೇಟೆ ಶ್ರೀ ನಾಮದೇವ ಭಜನಾ ಮಂದಿರದಲ್ಲಿ 98 ನೇ ಶ್ರೀ ಪಾಂಡುರಂಗ ವಿಠಲ ರುಖುಮಾಯಿ ದಿಂಡಿ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಅಧ್ಯಕ್ಷ ಎಂ.ಎಸ್ ವಿಠಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 8 ರಂದು ಬೆಳಿಗ್ಗೆ 5 ರಿಂದ 7 ರವರೆಗೆ ಕಾಕಡಾರತಿ, ಭಜನೆ, ಪಂಚಾಮೃತ ಅಭಿಷೇಕ ನೆರವೇರಲಿದ್ದು, ಸಂಜೆ 4 ಗಂಟೆಗೆ ವಿಠಲ ಮಂದಿರದಿಂದ ಭಜನೆ ಮುಖಾಂತರ ನಾಮದೇವ ಭಜನಾ ಮಂದಿರಕ್ಕೆ ಪೋತಿಯನ್ನು ತಂದು ಸ್ಥಾಪಿಸಲಾಗುವದು. ನಂತರ ಅನಂತ ಬೊಂಗಾಳೆ ಅವರಿಂದ ಕೀರ್ತನಾ ಕಾರ್ಯಕ್ರಮವಿದೆ.

ಸಂಜೆ 7.15ಕ್ಕೆ ಅಶೋಕ ಮಾಳೋದೆ ಕುಟುಂಬದಿಂದ 10 ಹಿರಿಯ ಚೇತನರಿಗೆ ಹಾಗೂ 5 ದಂಪತಿಗಳಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ. ನಂತರ 7.30 ಕ್ಕೆ ಸಮಾಜದ 60 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಮುಖ್ಯ ಅತಿಥಿಗಳಾಗಿ ಜಗನ್ನಾಥ್ ನಾಡಿಗೇರ್ ಆಗಮಿಸುವರು. ಸಾಧಕರಾದ ಶ್ರೀನಿವಾಸ್, ಪರಶುರಾಂ ಮಹೇಂದ್ರಕರ್, ಉಮಾ ಮಹೇಂದ್ರಕರ್, ಅವನಿ ಬೊಂಗಾಳೆ ಅವರನ್ನು ಸನ್ಮಾನಿಸಲಾಗುವುದು. ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ ಅಧ್ಯಕ್ಷತೆ ವಹಿಸಲಿದ್ದಾರೆ.

ನಾಡಿದ್ದು ದಿನಾಂಕ 9 ರ ಶನಿವಾರ ಬೆಳಿಗ್ಗೆ 5 ಕ್ಕೆ ಕಾಕಡರಾತಿ, ಅಭಿಷೇಕ ಹಾಗೂ ಮಂಗಳಾರತಿ ನಡೆಯಲಿದೆ. ಬೆಳಿಗ್ಗೆ 9 ಕ್ಕೆ ಶ್ರೀ ಜ್ಞಾನೇಶ್ವರಿ ಸಾಮುದಾಯಿಕ ಪಾರಾಯಣ, ನಂತರ ಭಜನೆ, ಪ್ರವಚನ ನೆರವೇರಲಿದೆ. ಸಂಜೆ 5.15 ಕ್ಕೆ ಮಯೂರ ರಥದಲ್ಲಿ ಶ್ರೀ ವಿಠಲ ರುಖುಮಾಯಿ ಉತ್ಸವ ಪ್ರಮುಖ ಬೀದಿಗಳಲ್ಲಿ ಜರುಗಲಿದೆ ಎಂದು ಮಾಹಿತಿ ನೀಡಿದರು.

ದಿನಾಂಕ 10 ರ ಭಾನುವಾರ ಬೆಳಿಗ್ಗೆ 5 ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9 ಕ್ಕೆ ಸ್ವಾಮಿಯ ಉತ್ಸವ ನೆರವೇರಲಿದೆ. ಇದರೊಂದಿಗೆ ದಿಂಡಿ ಉತ್ಸವ ಸಮಾರೋಪಗೊಳ್ಳಲಿದೆ.

ಅಂದು ಉತ್ಸವ ಬೆಳಿಗ್ಗೆ 10 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ಆರ್.ಹೆಚ್. ಛತ್ರದಲ್ಲಿ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ 12 ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ ಆಗಮಿಸಲಿದ್ದು, ಸಮಾಜದ ಅಧ್ಯಕ್ಷ ಎಂ.ಎಸ್. ವಿಠಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಮಾಜದ ಪದಾಧಿಕಾರಿಗಳಾದ ಕರಿಣ್ ಕುಮಾರ್, ಜ್ಞಾನದೇವ ಬೊಂಗಾಳೆ, ಕೆ.ಜಿ. ಯಲ್ಲಪ್ಪ, ಮನೋಹರ ವಿ. ಬೊಂಗಾಳೆ, ಹೆಚ್.ಕೆ. ಪರಶುರಾಮ್, ಆರ್.ಕೆ. ಆನಂದರಾವ್ ಉಪಸ್ಥಿತರಿದ್ದರು.

# ಜಯಕರ್ನಾಟಕ ಸಂಘಟನೆಯಿಂದ ಇಂದು ಹರಿಹರ ಬಂದ್‌ಗೆ ಕರೆ



**ಹರಿಹರ**

ಹರಿಹರ, ನ.7- ನಗರದ ತುಂಗಭದ್ರಾ ನದಿ ಹತ್ತಿರದ ದರ್ಗಾ ಮುಂಭಾಗದ ಬೀರೂರು- ಸಮ್ಮಸಗಿ ರಸ್ತೆಯನ್ನು ದುರಸ್ತಿ ಪಡಿಸಲು ಮುಂದಾಗದಿದ್ದರೆ ನಾಳೆ ದಿನಾಂಕ 8 ರ ಶುಕ್ರವಾರ ಹರಿಹರ ಬಂದ್ ಮಾಡಲಾಗುವುದು ಎಂದು ಜಯಕರ್ನಾಟಕ ಸಂಘಟನೆ ಸೇರಿದಂತೆ, 10 ಕ್ಕೂ ಹೆಚ್ಚು ಸಂಘಟನೆಗಳು ಮುಖಂಡರು ಎಚ್ಚರಿಸಿದ್ದಾರೆ.

ಪತ್ರಿಕಾಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವೇಳೆ ಜಯಕರ್ನಾಟಕ ಸಂಘಟನೆಯ ಗೋವಿಂದ ಮಂಜುನಾಥ್, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಡಿ.ಎಸ್.ಎಸ್. ಸಂಘಟನೆ ಕೊಟ್ರೇಶ್, ಹನುಮಂತಪ್ಪ ಕೊತ್ವಾಲ್, ಮಂಜುನಾಥ್ ಕೊಪ್ಪಳ, ಟಿಪ್ಪು ಸುಲ್ತಾನ್ ಸೈನಿಕ ಸೇನೆ ಸಿಕಂದರ್ ಧರವೇಶ್, ಬಿ. ಮುಗ್ದಂ, ರಕ್ಷಣಾ ವೇದಿಕೆಯ ಇಲಿಯಾಸ್ ಆಹ್ಮದ್, ಭಾಗ್ಯಮ್ಮ ರುದ್ರಗೌಡ, ಶ್ರೀನಿವಾಸ್, ಆಮ್ ಆದ್ಮಿ ಪಕ್ಷದ ಮಲ್ಲೇಶ್ ಮಾತನಾಡಿ, ಬೀರೂರು- ಸಮ್ಮಸಗಿ ರಸ್ತೆ ದುರಸ್ತಿ ಪಡಿಸಲು ಈಗಾಗಲೇ ಇಬ್ಬರು ಶಾಸಕರು ತಮ್ಮ ಅವಧಿಯಲ್ಲಿ ಮಾಡದೇ ಇರುವುದಕ್ಕೆ ಕಾರಣ, ಅವರ ಸ್ವ ಪ್ರತಿಷ್ಠೆಯಿಂದಾಗಿ ಮತ್ತು ದರ್ಗಾದವರು ಸಹ ಅವರ ಪ್ರತಿಷ್ಠೆಯನ್ನು ಮುಂದೆ ತರುವುದರಿಂದ ಈ ಚಿಕ್ಕದಾದ ರಸ್ತೆಯನ್ನು ದುರಸ್ತಿ ಪಡಿಸಲು 8 ವರ್ಷಗಳಿಂದ ಸತತವಾಗಿ ಮುಂದೂಡುತ್ತಾ, ಒಂದಿಲ್ಲೊಂದು ಸಮಸ್ಯೆಗಳು ಬರುತ್ತಿರುವುದು ಸಾಮಾನ್ಯವಾಗಿತ್ತು. ಸರ್ಕಾರ ಕೂಡ ಸಾರ್ವಜನಿಕರಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ 2 ಕೋಟಿ ರೂ.ಹಣ ಬಿಡುಗಡೆ ಮಾಡಿದೆ. ಇದನ್ನು ಮನಗೊಂಡು ಸ್ಥಳೀಯ ಶಾಸಕರು ಮತ್ತು ಅಧಿಕಾರಿಗಳು ಹಣ ವಾಪಸ್ ಹೋಗದಂತೆ ಆದಷ್ಟು ಬೇಗ ರಸ್ತೆಯನ್ನು ದುರಸ್ತಿ ಪಡಿಸಲು ಮುಂದಾಗಬೇಕಿದೆ ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹಬೀಬ್ ಉಲ್ಲಾ, ತಿಪ್ಪೇಸ್ವಾಮಿ, ಸೈಯದ್ ಸಮೀವುಲ್ಲಾ, ರಾಮಪ್ಪ ಬೇಟೇರ್, ಮಂಜುನಾಥ್, ಶಬ್ಬೀರ್ ಆಹ್ಮದ್ ಅಮಾನುಲ್ಲಾ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಏಡ್ಸ್ ತಡೆ ದಿನಾಚರಣೆ

ದಾವಣಗೆರೆ ತಾಲ್ಲೂಕು ಮಟ್ಟದ ವಿಶ್ವ ಏಡ್ಸ್ ತಡೆ ದಿನಾಚರಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30ಕ್ಕೆ ಮೋತಿ ವೀರಪ್ಪ ಕಾಲೇಜಿನಲ್ಲಿ ನಡೆಯಲಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ನಿಯಂತ್ರಣಾ ಘಟಕ ಹಾಗೂ ತಾಲ್ಲೂಕು ಪಂಚಾಯತ್, ಕಂದಾಯ ಇಲಾಖೆ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಇವರ ಸಹಯೋಗ ದಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಎಸ್. ಷಣ್ಮುಖಪ್ಪ ಉದ್ಘಾಟಿಸುವರು. ಪ್ರಾಂಶುಪಾಲ ಪಂಚಾಕ್ಷರಪ್ಪ ಅಧ್ಯಕ್ಷತೆ ವಹಿಸುವರು.

# ಜ್ಯೂಡೋ : ರಾಷ್ಟ್ರ ಮಟ್ಟಕ್ಕೆ ಆಯ್ಕೆ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 7 - ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಶಿಕ್ಷಕರು ಅವರಿಗೆ ಉತ್ತೇಜನ ನೀಡಬೇಕು ಎಂದು ಉಜ್ಜಯಿನಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಂ.ಎಂ. ಹರ್ಷವರ್ಧನ್ ತಿಳಿಸಿದರು.

ಪಟ್ಟಣದ ಎಸ್‌ಯುಜೆಎಂ ಕಾಲೇಜ್‌ನ ವಿದ್ಯಾರ್ಥಿಗಳು ಈಚೇಗೆ ರಾಮನಗರದಲ್ಲಿ ನಡೆದ ಜ್ಯೂಡೋ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಜಯ ಗಳಿಸಿದ್ದು, ಅವರನ್ನು ಸನ್ಮಾನಿಸಿ ಮಾತನಾಡಿದರು.


ಎಸ್‌ಯುಜೆಎಂ ಪದವಿ ಪೂರ್ವ ಕಾಲೇಜ್‌ನ ಪ್ರಾಚಾರ್ಯ ಹೆಚ್.ಮಲ್ಲಿಕಾರ್ಜುನ ಮಾತನಾಡಿ, ಜ್ಯೂಡೋ ಸ್ಪರ್ಧೆಯಲ್ಲಿ ಎಸ್‌ಯುಜೆಎಂ ಕಾಲೇಜ್‌ನ ವಿದ್ಯಾರ್ಥಿ ಎ. ನಾಗರಾಜ ಗೌಡ 45 ಕೆ.ಜಿ ವಿಭಾಗದಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಈಚೇಗೆ ರಾಮನಗರದಲ್ಲಿ ನಡೆದ ಜೂಡೋ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ಎಸ್‌ಯುಜೆಎಂ ಕಾಲೇಜಿನ ಎಸ್. ಪ್ರದೀಪ 40 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಸರ್ಕಾರಿ ಪದವಿ ಪೂರ್ವ ಕಾಲೇಜ್‌ನ ಪ್ರಗತಿ 52 ಕೆ.ಜಿ ವಿಭಾಗದಲ್ಲಿ ಚಿನ್ನದ ಪದಕ, ಎಂ. ರಂಜಿತ ಬೆಳ್ಳಿ ಪದಕ ಮತ್ತು ಎಸ್‌ಎಸ್‌ಎಚ್ ಜೈನ್ ಕಾಲೇಜ್‌ನ ವಿದ್ಯಾರ್ಥಿಗಳಾದ ಯು.ಆರ್. ಖಲೀಲ್ ರಹಮಾನ್ ಮತ್ತು ಎಸ್. ರಂಜಿತ ಬೆಳ್ಳಿ ಪದಕ ಪಡೆದು ಗೆಲುವು ಸಾಧಿಸಿ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಚಾರ್ಯ ಮಲ್ಲಿಕಾರ್ಜುನ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜ್ಞಾನ ಗುರು ವಿದ್ಯಾಪೀಠದ ನಿರ್ದೇಶಕ ಬೂದಿ ಶಿವಕುಮಾರ್, ಉಪನ್ಯಾಸಕ ಹೆಚ್. ಬಿ. ಸೋಮರೆಡ್ಡಿ, ಎಸ್. ಚನ್ನಬಸಪ್ಪ, ಬಿ.ಕೃಷ್ಣಮೂರ್ತಿ, ಎಸ್. ಕೊಟ್ರೇಶ್, ಎಂ. ಚಿಕ್ಕಪ್ರಸಾದ್, ಕೆ. ಬೀರಾನಾಯ್ಕ, ಸಿ.ಎಂ. ಪ್ರವೀಣ, ಆತ್ಮಾನಂದ ಮುಂದಿನ ಮನಿ, ಕೆ.ಎಂ. ಶೈಲಜಾ, ಬಿ. ಸುನಿಲ್, ಸಿಬ್ಬಂದಿ ಕಾರ್ಯದರ್ಶಿ ಟಿ.ಎಂ. ಜಯದೀಪ, ಎಂ.ಜಿ. ರುದ್ರಯ್ಯ ಉಪಸ್ಥಿತರಿದ್ದರು. ಹರಪನಹಳ್ಳಿ ಜ್ಯೂಡೋ ತರಬೇತುದಾರ ಡಿ.ಭಾಷಾ ಇದ್ದರು

# 10ರಂದು ಆರ್ಯ ಈಡಿಗರ ಬೃಹತ್ ಸಮಾವೇಶ



ದಾವಣಗೆರೆ, ಡಿ. 7- ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ (75 ನೇ ವಾರ್ಷಿಕೋತ್ಸವ) ಹಾಗೂ ಈಡಿಗ, ನಿಲ್ಲವ, ಪೂಜಾರಿ, ದೀವರ, ನಾಮಧಾರಿ ಸೇರಿದಂತೆ 26 ಪಂಗಡಗಳ ಬೃಹತ್ ಜಾಗೃತ ಸಮಾವೇಶವನ್ನು ಇದೇ ದಿನಾಂಕ 10 ರಂದು ಬೆಳಿಗ್ಗೆ 11 ಕ್ಕೆ ಬೆಂಗಳೂರು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರ್ಯ ಈಡಿಗ ಸಂಘದ ಪ್ರಧಾನ ಕಾರ್ಯದರ್ಶಿ ಎ. ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮುದಾಯದ ಮಠಾಧೀಶರಾದ ಸೋಲೂರಿನ ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರಿನ ರೇಣುಕಾನಂದ ಸ್ವಾಮೀಜಿ ಸೇರಿದಂತೆ ಇತರೆ ಮಠಾಧೀಶರು ಆಗಮಿಸಲಿದ್ದಾರೆ. ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ. ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಇತರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಜಿಲ್ಲಾ ಆರ್ಯ ಈಡಿಗರ ಸಂಘ, ಆರ್ಯ ಈಡಿಗರ ಮಹಿಳಾ ಸಂಘ, ಹರಿಹರ, ಹೊನ್ನಾಳಿ, ಜಗಳೂರು ಆರ್ಯ ಈಡಿಗರ ಸಂಘ, ರೇಣುಕಾಂಬ ಕ್ರೆಡಿಟ್ ಕೋ ಆಪ್ ಸೊಸೈಟಿ ಇವರೊಂದಿಗೆ ಜಿಲ್ಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ಸಮುದಾಯದ ಜನರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೆಚ್. ಶಂಕರ್, ಈ. ದೇವೇಂದ್ರಪ್ಪ, ರವೀಂದ್ರಬಾಬು, ಎಸ್. ಭರಮಪ್ಪ, ಕೃಷ್ಣಮೂರ್ತಿ, ಲೋಕಣ್ಣ, ಪ್ರಕಾಶ್, ತಿಪ್ಪೇಸ್ವಾಮಿ, ರಾಮದಾಸ್, ಗೋವಿಂದರಾಜು, ಬಕ್ಕಣ್ಣ, ಜಯಪ್ರಕಾಶ್, ರಘು ಮತ್ತಿತರರಿದ್ದರು.

## ಮಸೂದೆ ಮಂಡನೆ

**(1ನೇ ಪುಟದಿಂದ)** ರಾಜ್ಯ ಸರ್ಕಾರಕ್ಕೆ ನಿರ್ಣಾಯಕ ಆದಾಯದ ಮಾರ್ಗಗಳಾಗಿವೆ. ಇವುಗಳ ಮೂಲಕ ಈ ಹಣಕಾಸು ವರ್ಷದಲ್ಲಿ 25,000 ರೂ. ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಈ ಮೂಲಕ ದತ್ತು ಪತ್ರಗಳ ಮೇಲಿನ ಮುದ್ರಾಂಕ ಶುಲ್ಕವನ್ನು ಈಗಿರುವ 500 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಲಾಗುವುದು. ಅಫಿಡವಿಟ್‌ಗಳಿಗೆ ಪ್ರಸಕ್ತ 20 ರೂ. ಶುಲ್ಕವಿದ್ದು ಅದನ್ನು 100 ರೂ.ಗಳಿಗೆ ಹೆಚ್ಚಿಸಲಾಗುವುದು. ಪವರ್ ಆಫ್ ಅಟಾರ್ನಿ ಶುಲ್ಕವನ್ನು 100 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು.

ವಿಚ್ಛೇದನ ಪತ್ರಗಳ ಮುದ್ರಾಂಕ ಶುಲ್ಕವನ್ನು 100 ರಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು. ಪ್ರಮಾಣೀಕೃತ ದಾಖಲೆಗಳ ಶುಲ್ಕವನ್ನು 5 ರೂ.ಗಳಿಂದ 20 ರೂ.ಗಳಿಗೆ ಹೆಚ್ಚಿಸಲಾಗುವುದು.

## ಉತ್ಪಾದನೆ ನಿಷೇಧ

**(1ನೇ ಪುಟದಿಂದ)** ಕ್ರಮವನ್ನು ಸಕ್ಕರೆ ಉದ್ಯಮ ಸ್ವಾಗತಿಸಿದೆ.

2023-24ರ ಸಾಲಿನಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಕುಸಿತವಾಗಲಿದೆ ಎಂಬ ಅಂದಾಜಿನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಸರ್ಕಾರದ ಕ್ರಮವನ್ನು ಸ್ವಾಗತಿಸಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಪಕಾಶ್ ಪಿ. ನೈಕನವರೆ, ಬಿ-ಮೊಲಾಸಿಸ್ ಮೂಲಕ ಪಡೆದ ಸಾಕಷ್ಟು ಎಥೆನಾಲ್ ದಾಸ್ತಾನಿದೆ. ಸರ್ಕಾರದ ಕ್ರಮ ಉದ್ಯಮದ ಸಮಸ್ಯೆಗಳನ್ನು ಬಗೆಹರಿಸಲಿದೆ ಎಂದಿದ್ದಾರೆ. ಆದರೆ, ಕಬ್ಬಿನ ರಸ ಮಾತ್ರದಿಂದಲೇ ಎಥೆನಾಲ್ ಉತ್ಪಾದಿಸುವ ಹಲವು ಘಟಕಗಳು ಸ್ಥಾಪನೆಯಾಗಿವೆ. ಸರ್ಕಾರದ ನಿರ್ಧಾರದಿಂದ ಇವುಗಳ ಮೇಲೆ ಪರಿಣಾಮವಾಗಲಿದೆ ಎಂದವರು ಹೇಳಿದ್ದಾರೆ.

# ನಗರದ ಮಹಾರಾಜ ಪೇಟೆಯಲ್ಲಿ ಇಂದಿನಿಂದ ದಿಂಡಿ ಉತ್ಸವ



ಭಾವಸಾರ ಕ್ಷತ್ರಿಯ ದೈವ ಮಂಡಳಿ, ಭಜನಾ ಮಂಡಳಿ, ರುಖುಮಾಯಿ ಮಹಿಳಾ ಮಂಡಳಿ ಮತ್ತು ಕಲಾವತಿ ಮಹಿಳಾ ಮಂಡಳಿ ಹಾಗೂ ತರುಣ ಮಂಡಳಿ, ವಧು-ವರರ ಮಾಹಿತಿ ಕೇಂದ್ರ, ಬಿಬಿಐ ವತಿಯಿಂದ ಇಂದಿನಿಂದ 4 ದಿನಗಳ ಕಾಲ ಶ್ರೀ ವಿಠ್ಠಲ ರುಖುಮಾಯಿ ದೇವರ ದಿಂಡಿ ಉತ್ಸವ ಮತ್ತು ಶ್ರೀ ಸಂತ ಜ್ಞಾನೇಶ್ವರಿ ಮಹಾರಾಜರ ಸಮಾದಿ ಸೋಹಳ ಮಹೋತ್ಸವವನ್ನು ಮಹಾರಾಜ ಪೇಟೆಯಲ್ಲಿರುವ ಶ್ರೀ ವಿಠ್ಠಲ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಂಡರಪುರದ ಶ್ರೀ ಸದ್ಗುರು ಹರಿಭಕ್ತ ಪಾರಾಯಣ ವಾಸ್ಕರ್ ಮಹಾರಾಜ್ ಅವರ ಕೃಪಾಶೀರ್ವಾದದಿಂದ, ಪಂಡರಾಪುರದ ಶ್ರೀ ಗುರುವರ್ಯ ಹ.ಭ.ಪ. ಪ್ರಭಾಕರ್ ದಾದಾ ಬುವಾ ಬೋದಲೆ ಮಹಾರಾಜ್ ಅವರ ಸಾನ್ನಿಧ್ಯದಲ್ಲಿ ಈ ಮಹೋತ್ಸವ ನಡೆಯಲಿದೆ.

ಇಂದು ದಿಂಡಿ ಉತ್ಸವ ಕಾರ್ಯಕ್ರಮಗಳು ನಡೆಯಲಿದ್ದು, ಮಧ್ಯಾಹ್ನ 3 ಗಂಟೆಯಿಂದ ಸಂಜೆ 5ರವರೆಗೆ ಕಲಾವತಿ ಮಹಿಳಾ ಮಂಡಳಿಯವರಿಂದ ರಂಗೋಲಿ ಸ್ಪರ್ಧೆ, ಸಂಜೆ 6ರಿಂದ ಪೋತಿ ಸ್ಥಾಪನೆ, ಪಲ್ಲಕ್ಕಿ ಉತ್ಸವದೊಂದಿಗೆ ನಗರ ಪ್ರದಕ್ಷಣೆ ನಂತರ ಧ್ವಜ ಪೂಜೆ ನೆರವೇರಲಿದೆ. ರಾತ್ರಿ 8 ಗಂಟೆಯಿಂದ ಸತೀಶ್ ಮಾಂಡ್ರೆ ಲಕ್ಷ್ಮೇಶ್ವರ ಅವರಿಂದ ಕೀರ್ತನೆ ನಡೆಯಲಿದೆ. ಮಹಾಮಂಗಳಾರತಿ ಅಖಂಡ ವೀಣಾ ಜಾಗರಣೆ ನಡೆಯಲಿದೆ.

# ಸುಖ್‌ದೇವ್ ಗೋಗಾಮೆಡಿ ಹತ್ಯೆ ಖಂಡಿಸಿ ಇಂದು ಪ್ರತಿಭಟನೆ



ದಾವಣಗೆರೆ, ಡಿ. 7- ರಜಪೂತ್ ಕರ್ಣಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಸುಖ್‌ದೇವ್ ಸಿಂಗ್ ಗೋಗಾಮೆಡಿ ಹತ್ಯೆ ಖಂಡಿಸಿ ಜಿಲ್ಲಾ ರಜಪೂತ್ ಮಹಾಸಭಾ ಹಾಗೂ ವಿಷ್ಣು ಸಮಾಜದಿಂದ ನಾಳೆ ದಿನಾಂಕ 8 ರ ಶುಕ್ರವಾರ ಬೆಳಿಗ್ಗೆ 11 ಕ್ಕೆ ಪ್ರತಿಭಟನೆ ನಡೆಸಲಾಗುವುದು ಎಂದು ಮಹಾಸಭಾ ಜಿಲ್ಲಾಧ್ಯಕ್ಷ ಜೆ.ಈಶ್ವರ್ ಸಿಂಗ್ ಕವಿತಾಳ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಖ್‌ದೇವ್ ಗೋಗಾಮೆಡಿ ಅವರನ್ನು ರಾಜಸ್ಥಾನದ ಜೈಪುರ ನಗರದ ಅವರ ನಿವಾಸದಲ್ಲಿ ದುಷ್ಕರ್ಮಿಗಳು ಮನೆಗೆ ನುಗ್ಗಿ ದೇಶಿ ಬಂದೂಕುಗಳಿಂದ ಗೋಲಿಬಾರ್ ಮಾಡಿ ಹತ್ಯೆಗೈದಿದ್ದಾರೆ. ಇದು ಅತ್ಯಂತ ಖಂಡನೀಯ ಎಂದರು.

ಸುದ್ದಿಗೋಷ್ಠಿಯಲ್ಲಿ ಗೋಪಾಲ್ ಸಿಂಗ್, ಮೂಲಸಿಂಗ್ ರಾಥೋಡ್, ಸೈತಾನ್ ಸಿಂಗ್, ಅಮರ್ ಸಿಂಗ್ ಭಾಟಿ, ಗಣಪತ್ ಸಿಂಗ್ ದೇವ್ಡಾ ಮತ್ತಿತರರಿದ್ದರು.

# ಇಬ್ಬರು ಮನೆ ಕಳವು ಆರೋಪಿಗಳ ಬಂಧನ

ದಾವಣಗೆರೆ, ನ. 7- ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಮಂಡಕ್ಕಿ ಭಟ್ಟಿ ಲೇ ಔಟ್ ವಾಸಿ ಮಹಮ್ಮದ್ ಸಲೀಂ (23) ಹಾಗೂ ಎಸ್.ಜೆ.ಎಂ. ನಗರದ ಸೈಯದ್ ಶೇರು (27) ಬಂಧಿತರು. ಇವರಿಂದ ಕಳುವಾಗಿದ್ದ 57 ಸಾವಿರ ರೂ. ಮೌಲ್ಯದ ಎಲ್‌ಇಡಿ ಟಿವಿ ಸೇರಿದಂತೆ ಹಾಗೂ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇವರಿಂದ ಮತ್ತೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ 2.50 ಲಕ್ಷ ರೂ. ಬೆಲೆಯ 44 ಗ್ರಾಂ ಚಿನ್ನದ ಗಟ್ಟಿ, ಕೃತ್ಯಕ್ಕೆ ಬಳಸಿದ ಬೈಕ್ ಸೇರಿ ಒಟ್ಟು 3.47 ಲಕ್ಷ ರೂ. ಮೌಲ್ಯದ ಮಾಲು ವಶಪಡಿಸಿಕೊಳ್ಳಲಾಗಿದೆ.

ಈ ಆರೋಪಿಗಳ ಪೈಕಿ ಮಹಮ್ಮದ್ ಸಲೀಂ ಮೇಲೆ ದಾವಣಗೆರೆ ಗಾಂಧಿನಗರ ಪೊಲೀಸ್ ಠಾಣೆ, ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಸೈಯದ್ ಶೇರು ವಿರುದ್ಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಹುಬ್ಬಳ್ಳಿ ರೈಲ್ವೇಸ್ ನಲ್ಲಿ ಪ್ರಕರಣಗಳು ದಾಖಲಾಗಿವೆ.

ಗ್ರಾಮಾಂತರ ಠಾಣೆಯ ಪಿ.ಐ ಕಿರಣ್ ಕುಮಾರ್ ಇ.ವೈ ನೇತೃತ್ವದಲ್ಲಿ ಮಂಜುನಾಥ ಎಸ್. ಕಲ್ಲೇದೇವರ ಸಹಕಾರದೊಂದಿಗೆ ಪಿಎಸ್‌ಐ ಹಾರೂನ್ ಅಖ್ತರ್ ಹಾಗೂ ಜೋವಿತ್ ರಾಜ್ ಮತ್ತು ಠಾಣಾ ಸಿಬ್ಬಂದಿಯವರಾದ ದೇವೇಂದ್ರನಾಯ್ಕ್, ಅಣ್ಣಯ್ಯ, ಮಹಮ್ಮದ್ ಯೂಸುಫ್ ಅತ್ತರ್, ವೀರೇಶ್ ರವರನ್ನೊಳಗೊಂಡ ತಂಡ ಆರೋಪಿತರ ಪತ್ತೆ ಹಾಗೂ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

# ಡ್ರೈವಿಂಗ್ ಸ್ಕೂಲ್ ಮಾಲೀಕರ ಸಂಘದಿಂದ ಸತ್ಯಾಗ್ರಹ

ದಾವಣಗೆರೆ, ಡಿ. 7- ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಮೋಟಾರ್ ಡ್ರೈವಿಂಗ್ ಸ್ಕೂಲ್ ಮಾಲೀಕರ ಸಂಘಗಳ ಒಕ್ಕೂಟದಿಂದ ನಾಳೆ ದಿನಾಂಕ 8 ರ ಶುಕ್ರವಾರ ಬೆಳಿಗ್ಗೆ 9 ಕ್ಕೆ ಬೆಳಗಾವಿ ಸುವರ್ಣ ಸೌಧಕ್ಕೆ ಪಾದಯಾತ್ರೆ ಮೂಲಕ ತೆರಳಿ, ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಫಯಾಜ್ ಅಹಮದ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ರಾಜ್ಯದಲ್ಲಿ ಸುಮಾರು 2000 ಮೋಟಾರು ಡ್ರೈವಿಂಗ್ ಸ್ಕೂಲ್‌ಗಳಿದ್ದು, ಇವುಗಳನ್ನೇ ನಂಬಿಕೊಂಡು ಸಾವಿರಾರು ಕುಟುಂಬಗಳು ಜೀವನ ನಡೆಸು ತ್ತಿವೆ. ಆದರೆ ಕೇಂದ್ರ ಸರ್ಕಾರ 2022 ರಿಂದ ಹೊಸ ನೀತಿ ಜಾರಿ ಮಾಡಿರುವುದು ನೋವಿನ ಸಂಗತಿಯಾಗಿದೆ. ಕೆಲವು ರಾಜ್ಯಗಳಲ್ಲಿ ಇವುಗಳನ್ನು ಅನುಷ್ಠಾನಗೊಳಿಸದೇ ಆ ರಾಜ್ಯದ ಜನರ ಅನುಕೂಲಕ್ಕೆ ತಕ್ಕಂತೆ ಕಾನೂನು ರೂಪಿಸಿಕೊಂಡಿವೆ. ಅದೇ ರೀತಿ ಕರ್ನಾಟಕಕ್ಕೆ ಹೊಸ ನೀತಿ ತಂದರೆ ನಮ್ಮ ಮೋಟಾರ್ ಡ್ರೈವಿಂಗ್ ಸ್ಕೂಲ್‌ಗಳು ಸಂಕಷ್ಟಕ್ಕೆ ಒಳಗಾಗಲಿವೆ ಎಂದರು. ಈಶ್ವರ್, ನಾಗರಾಜ್, ಹೆಚ್.ಹೆಚ್. ಅಮೀರ್, ತಬರೇಜ್ ಮತ್ತಿತರರು ಉಪಸ್ಥಿತರಿದ್ದರು.

# ಮಾದಕ ವಸ್ತು, ಹುಲಿ ಉಗುರು ಮಾರಾಟ ಜಾಲ ಪತ್ತೆ

**7 ಆರೋಪಿಗಳ ಬಂಧನ**

ದಾವಣಗೆರೆ, ನ. 7- ನಗರದಲ್ಲಿ ಮಾದಕ ವಸ್ತು ಹಾಗೂ ಹುಲಿ ಉಗುರು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಪೊಲೀಸರು 7 ಆರೋಪಿಗಳನ್ನು ಬಂಧಿಸಿದ್ದಾರೆ.

ಜಿ.ಮಲ್ಲಿಕಾರ್ಜುನಪ್ಪ ಬಡಾವಣೆಯ ರಾಷ್ಟ್ರೀಯ ಹೆದ್ದಾರಿ ಬಳಿಯ ಸರ್ವೀಸ್ ರಸ್ತೆಯಿಂದ ಮಯೂರ ಗ್ಲೋಬಲ್ ಶಾಲೆ ಕಡೆ ಹೋಗುವ ರಸ್ತೆಯಲ್ಲಿ ಮಾದಕ ವಸ್ತು ಸೇವಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ್ದ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದರು.

ಇವರಿಂದ ಮಾದಕ ವಸ್ತು, 1 ಕಾರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದರು. ಈ ಆರೋಪಿಗಳಿಗೆ ಮಾದಕ ವಸ್ತು ಮಾರಾಟ ಮಾಡಿದ್ದ ಒಬ್ಬ ಆರೋಪಿಯನ್ನು ಹಿಡಿದು ಒಂದು ಮೊಬೈಲ್ ವಶಪಡಿಸಿಕೊಂಡು, ಆತ ನೀಡಿದ ಮಾಹಿತಿ ಮೇರೆಗೆ ಡಿ.3ರಂದು ಬೆಂಗಳೂರು ನಗರದ ಬಸವೇಶ್ವರ ಬಡಾವಣೆ 2ನೇ ಹಂತ 4ನೇ ಮೇನ್ 5ನೇ ಕ್ರಾಸ್ ನಲ್ಲಿರುವ ಮನೆಯ ಮೇಲೆ ಶೋಧನಾ ವಾರಂಟ್ ಪಡೆದು ದಾಳಿ ಮಾಡಿ ಮನೆಯಲ್ಲಿದ್ದ ಇಬ್ಬರು ಆರೋಪಿತರನ್ನು ವಶಕ್ಕೆ ಪಡೆದು, ಮನೆಯಲ್ಲಿದ್ದ ಎಂಡಿಎಂಎ ಮಾದಕ ವಸ್ತು ಮತ್ತು ಮೇಲ್ನೋಟಕ್ಕೆ ಹುಲಿಯ ಉಗುರಿನಂತೆ ಕಾಣುವ 6 ಹುಲಿ ಉಗುರುಗಳನ್ನು ಹಾಗೂ 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬಾಲಾಜಿ ನಗರದ ಅಶೋಕ್ ಕುಮಾರ್ ಎಸ್. (27), ಆರ್‌ಎಂಸಿ ಲಿಂಕ್ ರಸ್ತೆ ಪಾರ್ಕ್ ಹಿಂಭಾಗದ ವಾಸಿ ರಮೇಶ್ ಕುಮಾರ್ ಗಾಂಸಿ (39), ಪುಟ್ಟಿ ವ್ಯಾಪಾರಿ ಎಂ.ಆರ್. ಲೋಕೇಶ್ (40), ವಿನೋಬನಗರದ ಕಾರು ಚಾಲಕ ಕಾರ್ತಿಕ್ (32) ನಿಜಲಿಂಗಪ್ಪ ಬಡಾವಣೆಯ ಕಾರ್ಪೆಂಟರ್ ಕೆಲಸ ಮಾಡುವ ರಾಮ್ ರತನ್ (34) ಬಸವೇಶ್ವರ ಬಡಾವಣೆಯ ಸ್ಟೀಲ್ ರಿಲೀಂಗ್ ಕೆಲಸ ಮಾಡುವ ಸುನೀಲ್ ಕುಮಾರ್ (28) ಬೆಂಗಳೂರು ಕೂಡಿಗೆಹಳ್ಳಿಯಲ್ಲಿ ಸ್ಟೀಲ್ ಸ್ಕ್ರ್ಯಾಪ್ ವ್ಯಾಪಾರಿ ಅಶೋಕ್ ಕುಮಾರ್ (23) ಈ ಪ್ರಕರಣದಲ್ಲಿ ಬಂಧಿತರಾಗಿದ್ದಾರೆ.

ಒಟ್ಟಾರೆ ಈ ಪ್ರಕರಣದಲ್ಲಿ 3.20 ಲಕ್ಷ ರೂ. ಮೌಲ್ಯದ 49 ಗ್ರಾಂ ಮಾದಕ ವಸ್ತು, 6 ಹುಲಿ ಉಗುರು, 4 ಮೊಬೈಲ್, 1 ಕಾರು ವಶಪಡಿಸಿಕೊಳ್ಳಲಾಗಿದೆ. ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



## ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.**
**ದೂರವಾಣಿ ಸಂಖ್ಯೆ: 08192–208029**

ಸಂಖ್ಯೆ:–ದಾವಿ:ಅಭಿ:37/2023–24/3155 ದಿನಾಂಕ: 01.12.2023

### ದರಪಟ್ಟಿ ಪ್ರಕಟಣೆ

ದಾವಣಗೆರೆ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಾಲಯಗಳಿಗೆ ಬೇಕಾಗಿರುವ ಉಪಕರಣಗಳನ್ನು ದರಪಟ್ಟಿ ಮೂಲಕ ಖರೀದಿಸಬೇಕಾಗಿದ್ದು. ಉಪಕರಣಗಳನ್ನು ಸರಬರಾಜು ಮಾಡಲು ಇಚ್ಛಿಸುವ ಅಧಿಕೃತ ಡೀಲರ್‌ಗಳು ದಿನಾಂಕ: 20.12.2023 ಸಂಜೆ 5.00 ಗಂಟೆ ಒಳಗಾಗಿ ತಮ್ಮ ದರಗಳನ್ನು ನಮೂದಿಸಿ (ಉಪಕರಣಗಳ Specification ನೊಂದಿಗೆ) ಮೊಹರು ಮಾಡಿದ ಲಕೋಟೆಯನ್ನು ಅಧ್ಯಕ್ಷರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಶಿವಗಂಗೋತ್ರಿ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ–07 ಇವರಿಗೆ ಸಲ್ಲಿಸತಕ್ಕದ್ದು. ಕೋಟೇಶನ್‌ಗಳನ್ನು ದಿನಾಂಕ:21.12.2023 ರಂದು ತೆರೆಯಲಾಗುವುದು. ಸಮಯ ಮೀರಿ ಬಂದ ಕೊಟೇಶನ್/ ದರಪಟ್ಟಿಯನ್ನು ಅಂಗೀಕರಿಸಲಾಗುವುದಿಲ್ಲ. ನಿಬಂಧನೆಗಳು ಮತ್ತು ಉಪಕರಣಗಳ Specification ಗಾಗಿ ಡಾ. ಕೆ. ಎಮ್. ಈಶ್ವರಪ್ಪ, ಅಧ್ಯಕ್ಷರು, ಭೌತಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಮುದ್ದಾಂ (ಮೊಬೈಲ್ ನಂಬರ್ 9036830242) ಅಥವಾ ಈ ಅಂಚೆ km.eshwarappa@gmail.com) ಮೂಲಕ ಸಂಪರ್ಕಿಸಲು ಕೋರಲಾಗಿದೆ.

**ದರಪಟ್ಟಿ ನಮೂದಿಸುವ ನಮೂನೆ**

| ಕ್ರ. ಸಂ | ಉಪಕರಣಗಳ ಹೆಸರು | ಬೇಕಾಗಿರುವ ಉಪಕರಣಗಳ ಸಂಖ್ಯೆ | ದರ |
|---|---|---|---|
| 1 | Function Generator | 05 | |
| 2 | CRO (Digital DSG) | 03 | |
| 3 | CRO (Analog) Dual tracer | 03 | |
| 4 | Sodium Iodide Scintillation detector (Nucleonix Hyderabad make) | 01 | |
| 5 | Dual Power Supplies | 04 | |
| 6 | Electron Spin Resonance Experiment setup | 01 | |
| 7 | Hallprobe | 01 | |
| 8 | Thermionic emission Experimental Setup | 01 | |
| 9 | Diode Laser | 01 | |

* Number of Quantity may vary depending upon the budget.

ಸೂಚನೆಗಳು: (1) Partial quoting is not allowed. Dealers/ Suppliers are informed to quote for entire package (all 9 items) item wise.

ಸಹಿ/– ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

ವಾಸಾಇ/ದಾವಣಗೆರೆ/395/ ಕೆಎಸ್‌ಎಂಸಿಎ/2023–24


# ಜಗಳೂರನ್ನು ಚಿತ್ರದುರ್ಗಕ್ಕೆ ಮರುಸೇರ್ಪಡೆಗೆ ಮನವಿ



ಜಗಳೂರು, ಡಿ. 7 - ಜಗಳೂರು ತಾಲ್ಲೂಕನ್ನು ಪುನಃ ಚಿತ್ರದುರ್ಗ ಜಿಲ್ಲೆಗೆ ಮರುಸೇರ್ಪಡೆಗೊಳಿಸಲು ಒತ್ತಾಯಿಸಿ, ಹೋರಾಟ ಸಮಿತಿಯ ನಿಯೋಗದಲ್ಲಿ ತೆರಳಿ ಇಂದು ಜಿಲ್ಲಾಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಲಾಯಿತು.

ಜಗಳೂರು ತಾಲ್ಲೂಕನ್ನು ಚಿತ್ರದುರ್ಗ ಜಿಲ್ಲೆಗೆ ಪುನಃ ಸೇರ್ಪಡೆಗೊಳಿಸಲು ಹೋರಾಟ ಸಮಿತಿಯಿಂದ ಹಲವು ಬಾರಿ ಮನವಿ ಸಲ್ಲಿಸಲಾಗಿದೆ.

ಕಂದಾಯ ಸಚಿವರು ಹಾಗೂ ಮುಖ್ಯಮಂತ್ರಿಗಳ ಉಪಕಾರ್ಯದರ್ಶಿಗಳು ಸೇರಿದಂತೆ ಚಿತ್ರದುರ್ಗ ಹಾಗೂ ದಾವಣಗೆರೆ ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಂಡು ಸೂಕ್ತ ನಿರ್ದೇಶನ ನೀಡಲು ಸೂಚಿಸಲಾಗಿತ್ತು.

ಆದರೆ ಇದುವರೆಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೋರಾಟ ಸಮಿತಿ ಸದಸ್ಯರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಹೋರಾಟ ಸಮಿತಿ ಅಧ್ಯಕ್ಷ ಹೆಚ್.ತಿಮ್ಮಾರೆಡ್ಡಿ, ವಕೀಲ ಆರ್. ಓಬಳೇಶ್, ನಾಗಲಿಂಗಪ್ಪ, ಹಿರಿಯ ಮುಖಂಡರಾದ ಬಿ.ಡಿ.ಹನುಮಂತಪ್ಪ ರೆಡ್ಡಿ, ಎಂ.ಓಬಪ್ಪ, ಕೆ.ತಿಮ್ಮರಾಯಪ್ಪ , ಬಂಗಾರಪ್ಪ , ಸಿ.ತಿಪ್ಪೇಸ್ವಾಮಿ, ಖಾಸಿಂಪೀರ್, ಖಾದರ್ ಸಾಬ್, ಪುಟ್ಟಣ್ಣ , ಹನುಮಂತಾಪುರ ರಾಜಪ್ಪ, ಮಹಬೂಬ್ ಆಲಿ, ಕೆ.ಟಿ.ವೀರಸ್ವಾಮಿ, ನೂರ್ ಅಹಮದ್, ರಾಜಣ್ಣ ಮೇಸ್ತ್ರು, ಸತೀಶ್, ಓ. ಮಂಜಣ್ಣ, ಧನ್ಯಕುಮಾರ್, ಮಾದಿಹಳ್ಳಿ ಮಂಜುನಾಥ್ ಮುಂತಾದವರು ಇದ್ದರು.

## ನಗರದಲ್ಲಿ ಇಂದು ಮಕ್ಕಳ ದಿನಾಚರಣೆ

ರಾಜ್ಯ ಹಾಗೂ ಜಿಲ್ಲಾ ಬಾಲಭವನ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಜೆ.ಹೆಚ್ ಪಟೇಲ್ ಬಡಾವಣೆಯ ಜಿಲ್ಲಾ ಬಾಲಭವನದಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ಜಿಲ್ಲಾ ಬಾಲಭವನ ಸಮಿತಿಯ ಅಧ್ಯಕ್ಷ ಬಿ. ಸುರೇಶ್ ಇಟ್ನಾಳ್ ಉದ್ಘಾಟಿಸುವರು. ಪಾಲಿಕೆ ಆಯುಕ್ತ ರೇಣುಕಾ ಅಧ್ಯಕ್ಷತೆ ವಹಿಸುವರು.


**WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES**

Interested Parties may contact at :
**M/s R.Hanumanthappa & Son**
Hanumanthappa Buildings,
Poona - Bangalore Road, Davangere - 577 002.
**Ph. : 258834 / 94498 28834**



**ಸಾಯಿಬಾಬಾಗೆ ಆರತಿ ಬೆಳಗಿದ ಎಸ್ಸೆಸ್**

ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಬಾಬಾ ಮಂದಿರದಲ್ಲಿ ಗುರುವಾರ ಏರ್ಪಡಾಗಿದ್ದ ಕಾರ್ತೀಕ ಮಹೋತ್ಸವದ ಸಂದರ್ಭದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಅರತಿ ಬೆಳಗುವುದರ ಮೂಲಕ ವಿಶೇಷ ಪೂಜೆ ಸಲ್ಲಿಸಿದರು.

# ನಗರದ 10 ವೃತ್ತಗಳಲ್ಲಿ ಟ್ರಾಫಿಕ್ ಬೂತ್ ಉದ್ಘಾಟನೆ

## ಶೀಘ್ರ ಪ್ರಮುಖ ವೃತ್ತಗಳಲ್ಲಿ ಸಂಚಾರಿ ಪೊಲೀಸ್ ಬೂತ್‌ಗಳ ಅಳವಡಿಕೆ : ಎಸ್ಪಿ ಉಮಾ ಪ್ರಶಾಂತ್

ದಾವಣಗೆರೆ, ಡಿ. 7 - ನಗರದ ಪ್ರಮುಖ ವೃತ್ತಗಳಲ್ಲಿ ಸಂಚಾರಿ ಪೊಲೀಸರಿಗಾಗಿ ಬೂತ್‌ಗಳನ್ನು ಅಳವಡಿಸಲಾಗುತ್ತಿದ್ದು, ಇದರಿಂದ ಸಿಬ್ಬಂದಿ ಹಾಗೂ ಸಾರ್ವಜನಿಕರಿಬ್ಬರಿಗೂ ಅನುಕೂಲವಾಗಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ನಗರದ ಅರುಣಾ ಟಾಕೀಸ್ ವೃತ್ತದಲ್ಲಿ ಟ್ರಾಫಿಕ್ ಬೂತ್‌ಗಳನ್ನು ಉದ್ಘಾಟಿಸಿದ ನಂತರ ಮಾತನಾಡಿದ ಅವರು, ಸಂಚಾರಿ ಪೊಲೀಸರಿಗೆ ಬಿಸಿಲು - ಮಳೆಯಿಂದ ರಕ್ಷಣೆ ನೀಡಲು ಸ್ಮಾರ್ಟ್ ಸಿಟಿ ಸಹಭಾಗಿತ್ವದಲ್ಲಿ ಬೂತ್‌ಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಈ ದಿನ 10 ಬೂತ್‌ಗಳನ್ನು ಉದ್ಘಾಟಿಸಲಾಗಿದೆ. ಇನ್ನೂ 12 ಬೂತ್‌ಗಳನ್ನು ಶೀಘ್ರದಲ್ಲೇ ಉದ್ಘಾಟಿಸಲಾಗುವುದು. ನಗರದ ಎಲ್ಲಾ ಪ್ರಮುಖ ವೃತ್ತಗಳಲ್ಲಿ ಸಂಚಾರಿ ಪೊಲೀಸರ ಆಶ್ರಯಕ್ಕೆ ಬೂತ್‌ಗಳಿರಲಿವೆ ಎಂದು ಎಸ್ಪಿ ಹೇಳಿದರು.



ಈ ಬೂತ್‌ಗಳು 6 ಅಡಿ ಅಗಲ ಹಾಗೂ 7.5 ಅಡಿ ಎತ್ತರದಲ್ಲಿವೆ. ಇವುಗಳಲ್ಲಿ ಸೌರ ಫಲಕ, ಯು.ಪಿ.ಎಸ್. ಫ್ಯಾನ್, ಬೆಳಕು, ಸ್ಪೀಕರ್, ಎಲ್‌ಇಡಿ ಫಲಕ, ಮೈಕ್ ಹಾಗೂ ವೆಂಟಿಲೇಷನ್ ಫ್ಯಾನ್‌ಗಳಿವೆ ಎಂದವರು ವಿವರಿಸಿದರು.

ರಾಣಿ ಚೆನ್ನಮ್ಮ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಜಯದೇವ ವೃತ್ತ, ಐ.ಟಿ.ಐ. ಕಾಲೇಜು ಬಳಿಯ ವೃತ್ತ, ಪಿ.ಜೆ. ಕ್ರಾಸ್ ಮುಂತಾದ ಹತ್ತು ಕಡೆಗಳಲ್ಲಿ ಇಂದು ಬೂತ್‌ಗಳು ಚಾಲನೆ ಪಡೆದಿವೆ. ಇದರಿಂದ ಸಂಚಾರಿ ಪೊಲೀಸರು ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗಲಿದೆ ಎಂದು ಎಸ್ಪಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಪ್ರತಿ ಬೂತ್‌ಗೆ 3.5 ಲಕ್ಷ ರೂ. ವೆಚ್ಚವಾಗಿದೆ. ಸ್ಮಾರ್ಟ್ ಸಿಟಿ ಪ್ರಸಕ್ತ ಇವುಗಳನ್ನು ನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಗೆ ಹಸ್ತಾಂತರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸ್ಮಾರ್ಟ್ ಸಿಟಿ ಐ.ಟಿ. ವಿಭಾಗದ ಮುಖ್ಯಸ್ಥೆ ಮಮತಾ, ಸ್ಮಾರ್ಟ್ ಸಿಟಿ ಮುಖ್ಯ ಇಂಜಿನಿಯರ್ ವಿಶ್ವನಾಥ್, ಡಿ.ಎಸ್.ಪಿ. ಮಲ್ಲೇಶ್, ಸಂಚಾರಿ ಪೊಲೀಸ್ ವೃತ್ತ ನಿರೀಕ್ಷಕ ನಲವಾಗಲು ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.


# ಕೇಂದ್ರದ ಅನುದಾನದಲ್ಲಿ 40 ಸಾವಿರ ಕೋಟಿ ರೂ. ಕಡಿತ

ಬೆಳಗಾವಿ, ಡಿ. 7 - ಕೇಂದ್ರ ಸರ್ಕಾರದಿಂದ ತೆರಿಗೆಯ ರಾಜ್ಯದ ಪಾಲು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಬರಬೇಕಾದ ಅನುದಾನ 40,000 ಕೋಟಿ ರೂ. ಕಡಿತವಾಗಿದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಯು.ಬಿ. ವೆಂಕಟೇಶ್ ಅವರ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಉತ್ತರಿಸಿದ ಸಚಿವರು, ಇದರ ಪರಿಣಾಮ ರಾಜ್ಯ ಹಣಕಾಸು ಪರಿಸ್ಥಿತಿ ಮೇಲೆ ಒತ್ತಡ ಹೆಚ್ಚಿದ್ದು, ನಾವು ನಮ್ಮ ಸಂಪನ್ಮೂಲದ ಮೇಲೆಯೇ ಹೆಚ್ಚು ಅವಲಂಬಿಸಬೇಕಾಗಿದೆ ಎಂದರು.

2018-19ನೇ ಸಾಲಿನಿಂದ 2022-23ರ ಸಾಲಿನವರೆಗಿನ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಗಾಗಿ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ಬಿಡುಗಡೆಯಾದ ಅನುದಾನ ಎಷ್ಟು, ಈ ಅನುದಾನದಲ್ಲಿ ಖರ್ಚಾದ ಹಣ ಎಷ್ಟು? ಎಂದು ಪ್ರಶ್ನಿಸಿದ್ದರು.

ನಮ್ಮ ರಾಜ್ಯದ ಬಜೆಟ್ ಗಾತ್ರ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ತೆರಿಗೆ ಪಾಲು ಹೆಚ್ಚಳವಾಗಿದೆ. ಆದರೆ, ಬಜೆಟ್ ಗಾತ್ರಕ್ಕೆ ಹೋಲಿಕೆ ಮಾಡಿದರೆ, ಕೇಂದ್ರದಿಂದ 5 ವರ್ಷಗಳಲ್ಲಿ ಸುಮಾರು 40,000 ಕೋಟಿ ರೂ. ಅನುದಾನ ಕಡಿತವಾಗಿದೆ. ಇದರಿಂದ ನಮ್ಮ ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚಿನ ಹೊಡೆತ ಬಿದ್ದಿದೆ ಎಂದು ಬೇಸರ ವ್ಯಕ್ತಪಡಿಸಿದರು.



2017-18ನೇ ಸಾಲಿನಲ್ಲಿ ಅಂದಿನ ಸರ್ಕಾರ 2.37 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದಾಗ ಕೇಂದ್ರ ಸರ್ಕಾರ 43,369 ಕೋಟಿ ರೂ. (ಶೇ.23.3) ಅನುದಾನ ನೀಡಿತ್ತು. ಪ್ರಸ್ತುತ 3.25 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಲಾಗಿದ್ದು, ಕೇಂದ್ರದಿಂದ ನಮಗೆ ಸಿಗುವುದು ಕೇವಲ 56,000 ಕೋಟಿ ರೂ. ಅಂದರೆ ಕೇವಲ ಶೇ.17.5 ಮಾತ್ರ. ನಮ್ಮ ಬಜೆಟ್ ಗಾತ್ರ ಹೆಚ್ಚುತ್ತಿದೆಯೇ ಹೊರತು, ಕೇಂದ್ರದ ಪಾಲು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ. ಬಜೆಟ್ ಗಾತ್ರಕ್ಕೆ ತಕ್ಕಂತೆ ಅನುದಾನ ನೀಡಬೇಕಲ್ಲವೇ? ಎಂದು ಅವರು ಪ್ರಶ್ನಿಸಿದರು.

ಕೇಂದ್ರ ಪುರಸ್ಕೃತ ಯೋಜನೆಯಿಂದ 20,000 ಕೋಟಿ ರೂ. ಹಾಗೂ ಜಿಎಸ್‌ಟಿ ಪರಿಹಾರವಾಗಿ 20,000 ಕೋಟಿ ರೂ. ರಾಜ್ಯಕ್ಕೆ ಬರಬೇಕು. ವರ್ಷದಿಂದ ವರ್ಷಕ್ಕೆ ಕೇಂದ್ರದ ತೆರಿಗೆ ಪಾಲು ಕಡಿಮೆಯಾಗುತ್ತಿದೆಯೇ ಹೊರತು, ಹೆಚ್ಚಳವಾಗುತ್ತಿಲ್ಲ. ನಮ್ಮ ಪಾಲು ಮಾತ್ರ ಹೆಚ್ಚಾಗುತ್ತಲೇ ಇದೆ. ಕೇಂದ್ರ ಸರ್ಕಾರ ನಮಗೆ ಆರ್ಥಿಕ ವರ್ಷದ ಅವಧಿಯೊಳಗೆ ನಮ್ಮ ಪಾಲಿನ ಹಣವನ್ನು ಕೊಡಬಹುದು ಎಂದು ಸಚಿವ ಕೃಷ್ಣಭೈರೇಗೌಡ ವಿಶ್ವಾಸ ವ್ಯಕ್ತಪಡಿಸಿದರು. 14 ಮತ್ತು 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕೇಂದ್ರಕ್ಕೆ 5,495 ಕೋಟಿ ರೂ. ವಿಶೇಷ ಅನುದಾನ ಹಾಗೂ 6,000 ಕೋಟಿ ರೂ. ಜಿಎಸ್‌ಟಿ ಪರಿಹಾರ ಸೇರಿದಂತೆ ರಾಜ್ಯಕ್ಕೆ 11,495 ಕೋಟಿ ರೂ. ಅನುದಾನ ಬರಬೇಕು.

ಕಳೆದ ಆ.10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರಿಗೆ ಪತ್ರ ಬರೆದು ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದ್ದರು. ಆದರೂ ಹಣ ಬಿಡುಗಡೆ ಮಾಡಿಲ್ಲ. ಖಂಡಿತವಾಗಿಯೂ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಿಎಸ್‌ಟಿ ಪರಿಹಾರವಾಗಿ 2,339 ಕೋಟಿ ರೂ. ಹಾಗೂ ಕೇಂದ್ರ ಪುರಸ್ಕೃತ ಯೋಜನೆಗೆ 1,191 ಕೋಟಿ ರೂ. ಬಾಕಿ ಇದ್ದು, ಇದನ್ನು ಬಿಡುಗಡೆ ಮಾಡುವಂತೆ ಕೋರಿ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ನಮ್ಮ ಪ್ರಯತ್ನವನ್ನು ನಾವು ಮುಂದುವರೆಸಿದ್ದೇವೆ. ಕೇಂದ್ರ ಸರ್ಕಾರ ನಮಗೆ ಅನುದಾನವನ್ನು ಬಿಡುಗಡೆ ಮಾಡುವ ವಿಶ್ವಾಸವಿದೆ ಎಂದರು.

ಒಂದು ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದಾಗ, ಶೇ.23 ರಷ್ಟು ಕೇಂದ್ರದ ಅನುದಾನ ದೊರೆಯುತ್ತಿತ್ತು. ಈಗ ಮೂರು ಲಕ್ಷ ಕೋಟಿ ರೂ.ಗೂ ಹೆಚ್ಚು ಬಜೆಟ್ ಮಂಡಿಸಿರುವಾಗ 76 ಸಾವಿರ ಕೋಟಿ ರೂ. ಅನುದಾನ ದೊರೆಯಬೇಕು. ದುರ್ದೈವವೆಂದರೆ, ಬಜೆಟ್ ಗಾತ್ರವನ್ನೇ ಕೇಂದ್ರ ಸರ್ಕಾರ ಇಳಿಕೆ ಮಾಡಿದೆ.

ನಮ್ಮ ಸಂಪತ್ತಿನ ಮೇಲೆ ನಾವು ಅವಲಂಬಿತವಾಗಿರುವುದರಿಂದ ನಮಗೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತದೆ. ಕೇಂದ್ರ ಸರ್ಕಾರ ನೆರವಿಗೆ ಧಾವಿಸಬೇಕು ಎಂದು ಅವರು ಮನವಿ ಮಾಡಿದರು.

# ಸಹನಾ ಭರತನಾಟ್ಯ ರಂಗ ಪ್ರವೇಶ



ದಾವಣಗೆರೆ, ಡಿ.7- ನಗರದ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವಿದ್ಯಾರ್ಥಿನಿ, ವಿದುಷಿ ಪೂರ್ಣಿಮಾ ಭಾಗವತರ ಶಿಷ್ಯೆ, ವಿದುಷಿ ಬಿ. ಸಹನಾ ಭರತನಾಟ ರಂಗ ಪ್ರವೇಶ ಮಾಡಿದರು.

ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಮೊನ್ನೆ ಸಂಜೆ ನಡೆದ ರಂಗಪ್ರವೇಶ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನದ ಮೂಲಕ ರಂಗ ಪ್ರವೇಶ ಮಾಡಿದರು. ಭಾವಭಿನ್ನತೆಗೆ ಹೆಚ್ಚು ಅವಕಾಶವಿರುವ ವರ್ಣ ನೃತ್ಯದಲ್ಲಿ ಕಣ್ಮನ ಸೆಳೆಯುವ ಪ್ರದರ್ಶನ ನೀಡಿದ ಸಹನಾ ಪ್ರೇಕ್ಷಕರಿಂದ ಕರತಾಡನದ ಮೆಚ್ಚುಗೆ ಪಡೆದರು.

ವಿದ್ವಾನ್ ರಾಜಗೋಪಾಲ ಭಾಗವತರ ನೃತ್ಯ ಬಂಧಗಳ ರಚನೆ, ಸಾಹಿತ್ಯ, ಸಂಗೀತದ ಜತೆ ಶ್ರೀಮತಿ ಪೂರ್ಣಿಮಾ ಭಾಗವತರು ನೃತ್ಯ ಸಂಯೋಜನೆ ಮಾಡಿದ್ದರು.

ಹಿಮ್ಮೇಳದಲ್ಲಿ ವಿದ್ವಾನ್ ಬಿ. ಶ್ರೀನಾಥ ಭಟ್ ಮೃದಂಗ, ವಿದ್ವಾನ್ ಎಂ. ಆರ್. ರಾಜೇಶ್ ಕೊಳಲು, ವಿದ್ವಾನ್ ಎಂ.ಆರ್. ಶ್ರೀಕಾಂತ್ ವಯೋಲಿನ್ ಸಾಥ್ ನೀಡಿದರು. ರಂಗಪ್ರವೇಶ ಮಾಡಿದ ವಿದುಷಿ ಸಹನಾ ದಾವಣಗೆರೆಯ ವರ್ತಕ ಬಸವರಾಜ ಬನ್ನೆಟ್ಟಿ ಮತ್ತು ರೇಣುಕಾ ದಂಪತಿಯ ಪುತ್ರಿ.

**ನಾಲ್ಕನೇ ರಂಗ ಪ್ರವೇಶ :** ರಂಗ ಪ್ರವೇಶ ಸಭಾ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತನಾಡಿದ ಸಂಸ್ಥೆಯ ವಿದ್ವಾನ್ ರಾಜಗೋಪಾಲ ಭಾಗವತರು, ನಮ್ಮ ಸಂಸ್ಥೆಯಿಂದ ಭರತ ನಾಟ್ಯದಲ್ಲಿ ನಾಲ್ಕನೇ ರಂಗ ಪ್ರವೇಶವಿದು. 2013 ರಲ್ಲಿ ನಮ್ಮ ವಿದ್ಯಾರ್ಥಿನಿ ನಯನಾ ರಂಗ ಪ್ರವೇಶ ಮಾಡಿದರು. ನಂತರ ವಿದ್ಯಾರ್ಥಿನಿ ನಂದನಾ, ಡಾ. ಸಂಸ್ಕೃತಿ ರಂಗ ಪ್ರವೇಶ ಮಾಡಿದ್ದಾರೆ. ಬೆಂಗಳೂರಿನ ಶ್ರೀಮಂತರಿಗೆ ಸೀಮಿತವಾಗಿದ್ದ ರಂಗ ಪ್ರವೇಶವನ್ನು ನಮ್ಮ ಸಂಸ್ಥೆ ದಾವಣಗೆರೆ ನಗರದಲ್ಲಿ ಸಾಮಾನ್ಯ ಜನರಿಗೂ ಲಭ್ಯವಾಗುವಂತೆ ಆಯೋಜನೆ ಮಾಡಿದೆ. ಈ ಸಾಧನೆ ಹಿಂದೆ ಗುರುಗಳ ಶ್ರಮವೂ ಹೆಚ್ಚಿದೆ ಎಂದು ಹೇಳಿದರು.

ಇಂದಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳಿಗೆ ನಾವು ಟ್ಯೂನ್ ಆಗಬೇಕು, ಅವರ ಮುಖ್ಯ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಸಂಸ್ಥೆ ಕಲಾಭ್ಯಾಸ ನೀಡುತ್ತಾ ಬರುತ್ತಿದೆ. ಇಂದು ಪ್ರತಿಭಾವಂತರಿಗಿಂತ ಒಳ್ಳೆಯವರು ಸಮಾಜಕ್ಕೆ ಬೇಕಿದೆ. ರಂಗ ಪ್ರವೇಶ ಮಾಡಿದ ಸಹನಾ ಸ್ನಾತಕೋತ್ತರ ಪದವಿ ಪಡೆದಿದ್ದು, ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರು. ಎಸ್‌ಎಸ್‌ಎನ್‌ಪಿಎಸ್ ಶಾಲೆಯ ಡೀನ್ ಮಂಜುನಾಥ ರಂಗರಾಜು ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಸದಾನಂದ ಹೆಗಡೆ, ವಿದ್ವಾನ್ ಡಾ. ಶಿವಶಂಕರ್, ಸಾಗರದ ವಿದ್ವಾನ್ ಜನಾರ್ಧನ್ ಇದ್ದರು.

# ಪಾರ್ವತಮ್ಮ ಮೆಮೋರಿಯಲ್ ಕ್ರಿಕೆಟ್ ಟ್ರೋಫಿ



ದಾವಣಗೆರೆ, ಡಿ. 7 - ನಗರದ ಹೊರವಲಯದಲ್ಲಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿಯುತ ಶಾಲೆ ತೋಳಹುಣಸೆಯ ಶಿವಗಂಗೋತ್ರಿ ಮೈದಾನದಲ್ಲಿ ನಡೆದ 17 ವರ್ಷದೊಳಗಿನ ಅಂತರ್ ಶಾಲೆಯ ಶ್ರೀಮತಿ ಪಾರ್ವತಮ್ಮ ಮೆಮೋರಿಯಲ್ ಟ್ರೋಫಿ ಪಂದ್ಯಾವಳಿಯಲ್ಲಿ ಆತಿಥೇಯ ಪಿ.ಎಸ್.ಎಸ್.ಇ.ಎಮ್.ಆರ್ ಶಾಲಾ ತಂಡ ಹೊಸದುರ್ಗದ ಎಸ್.ಡಿ.ಎ ತಂಡವನ್ನು 93 ಓಟಗಳಿಂದ ಭರ್ಜರಿ ಜಯಗಳಿಸಿ ಪ್ರಶಸ್ತಿಯನ್ನು ತನ್ನಲ್ಲಿರಿಸಿಕೊಂಡಿತು.

ಅಂತಿಮ ಪಂದ್ಯದಲ್ಲಿ ಟಾಸ್ಕ್ ಸೋತು ಬ್ಯಾಟಿಂಗ್ ಮಾಡಿದ ಪಿ.ಎಸ್.ಎಸ್.ಇ.ಎಮ್ ಆರ್ ಶಾಲೆಯ ಆಕಾಶ್ ಅವರು 35 ಎಸೆತಗಳಲ್ಲಿ ಅಜೇಯ 62 ಓಟ ಮತ್ತು ಸಿದ್ಧಾರ್ಥ ಎಮ್ ಜಿ ಅವರು 23 ಎಸೆತಗಳಲ್ಲಿ ಅಜೇಯ 40 ಓಟಗಳ ಕಾರಣದಿಂದ ನಿಗದಿತ 10 ಓವರುಗಳಲ್ಲಿ ಒಂದು ಹುದ್ದರಿ ನಷ್ಟಕ್ಕೆ 122 ಓಟಗಳನ್ನು ಗಳಿಸಿತ್ತು. ಗೆಲ್ಲಲು 123 ಓಟಗಳನ್ನು ಬೆನ್ನು ಹತ್ತಿದ ಹೊಸದುರ್ಗದ ಎಸ್‌ಡಿಎ ಶಾಲೆ ತಂಡವು ಪಿ.ಎಸ್.ಎಸ್.ಇ.ಎಮ್.ಶಾಲಾ ತಂಡದ ಸಿದ್ಧಾರ್ಥ ಎಮ್ ಜಿ ಮತ್ತು ಯಶ್ ಶಿರಿಕರ್ ವೇಗದ ದಾಳಿಗೆ, ಅತ್ಯುತ್ತಮ ಕ್ಷೇತ್ರ ರಕ್ಷಣೆಯಿಂದ ಕೇವಲ 29 ಓಟಗಳಿಗೆ ಸರ್ವ ಪಥನಗೊಂಡಿತು. ಸಿದ್ಧಾರ್ಥ ಎಮ್.ಜಿ ಮೂರು ವಿಕೆಟ್ ಪಡೆದರು.

ಸರಣಿಯ ಅತ್ಯುತ್ತಮ ದಾಂಡಿಗ ಪ್ರಶಸ್ತಿ ಮತ್ತು ಸರಣಿಯ ಪುರುಷೋತ್ತಮ ಪ್ರಶಸ್ತಿಯನ್ನು ಪಿ.ಎಸ್.ಎಸ್.ಇ.ಎಮ್ ಆರ್ ಶಾಲೆಯ ಆಕಾಶ್ ಪಡೆದರೆ, ಸಿದ್ಧಾರ್ಥ ಎಮ್.ಜಿ ಅತ್ಯುತ್ತಮ ಬೌಲರ್ ಪ್ರಶಸ್ತಿಯನ್ನು ಪಡೆದರು.

ಸಂಸ್ಥೆಯ ಮುಖ್ಯಸ್ಥ ಮಂಜನಾಥ ರಂಗರಾಜು ಅವರು ಪಾರ್ವತಮ್ಮ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದರು. ಶಾಲೆಯ ಉಪ ಪ್ರಾಂಶುಪಾಲರಾದ ಉಮಾಪತಿ ಎಚ್.ಜಿ. ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಈ ಸಂದರ್ಭದಲ್ಲಿ ಶಾಲೆಯ ದೈಹಿಕ ಶಿಕ್ಷಣ ನಿರ್ದೇಶಕರಾದ ಸಂಜೀವ್ ಕುಮಾರ್, ಕನ್ನಡ ಉಪನ್ಯಾಸಕ ಶಂಕರ್ ನೆಶ್ವಿ, ಸ್ಕೋರರ್ ಮನೋಜ್, ಪಂದ್ಯಾವಳಿಯ ತೀರ್ಪುಗಾರರಾದ ವೆಂಕಟೇಶ್ ಮತ್ತು ಅಭಿಷೇಕ್ ಮುಂತಾದವರು ಉಪಸ್ಥಿತರಿದ್ದರು.

# ಎಲೆಬೇತೂರಿನಲ್ಲಿ ನಾಳೆ ಕಾರ್ತಿಕೋತ್ಸವ



ದಾವಣಗೆರೆ. ಡಿ. 7- ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 9ರ ಶನಿವಾರ ನಡೆಯಲಿದೆ. ಬೆಳಿಗ್ಗೆ ಶ್ರೀ ಆಂಜನೇಯ ಸ್ವಾಮಿ ಹಾಗೂ ಈಶ್ವರ-ಬಸವಣ್ಣ ದೇವರಿಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಬಿಲ್ವಾರ್ಚನೆ ಹಾಗೂ ಮಂಗಳಾರತಿ ನಡೆಯಲಿದೆ. ಸಂಜೆ 6.30ಕ್ಕೆ ಕಾರ್ತಿಕ ಹಚ್ಚುವುದು, ಮಹಾಮಂಗಳಾರತಿ ಹಾಗೂ ಫಳ್ಹಾರ ವಿನಿಯೋಗ ನಡೆಯಲಿದೆ.

# ಆದಾಯ ತೆರಿಗೆ ಇಲಾಖೆ ದಾಳಿ : 150 ಕೋಟಿ ರೂ. ನಗದು ವಶ

ಭುವನೇಶ್ವರ್, ಡಿ. 7 – ಒಡಿಶಾದ ಡಿಸ್ಟಿಲರಿ ಸಮೂಹದ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ, 150 ಕೋಟಿ ರೂ.ಗಳಿಗೂ ಹೆಚ್ಚಿನ ನಗದು ವಶಪಡಿಸಿಕೊಂಡಿದೆ. ಬುಧವಾರ ದಾಳಿ ಆರಂಭಿಸಲಾಗಿತ್ತು. ಬೌಧ್ ಡಿಸ್ಟಿಲರಿ ಹಾಗೂ ಅದಕ್ಕೆ ಸಂಬಂಧಿಸಿದ ಕೆಲ ಸಂಸ್ಥೆಗಳ ಮೇಲೆ ದಾಳಿ ನಡೆಸಲಾಗಿದೆ. ಭುವನೇಶ್ವರ, ಬಲಂಗೀರ್ ಹಾಗೂ ಸಂಬಲ್ಪುರಗಳಲ್ಲದೇ ರಾಂಚಿ ಮತ್ತು ಕೊಲ್ಕೊತ್ತಾಗಳಲ್ಲೂ ದಾಳಿ ನಡೆಸಲಾಗಿದೆ.

# ಸೈಕಲ್ ನೀಡುವ ಬಗ್ಗೆ ಶೀಘ್ರವೇ ತೀರ್ಮಾನ



ಬೆಳಗಾವಿ, ಡಿ. 7 - ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ ಕಾರ್ಯಕ್ರಮ ಮುಂದುವರೆಸುವ ಬಗ್ಗೆ ಶೀಘ್ರವೇ ತೀರ್ಮಾನ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಪ್ರದೀಪ್ ಈಶ್ವರ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಈ ಹಿಂದೆ 2019-20ನೇ ಸಾಲಿನಲ್ಲಿ ಉಚಿತ ಬೈಸಿಕಲ್ ವಿತರಣೆ ಮಾಡಲಾಗಿರುತ್ತದೆ ಎಂದರು.

ಪ್ರಸ್ತುತ ಸಾಲಿನಲ್ಲಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಿಸಲಾಗುತ್ತಿಲ್ಲ. ಆದರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಾಲೆಗೆ ನಿರಂತರವಾಗಿ ಹಾಜರಾಗಲು ಅನುಕೂಲವಾಗುವಂತೆ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸಲು ಉಚಿತವಾಗಿ ಬಸ್ ಪಾಸ್ ವಿತರಿಸಲಾಗುತ್ತಿದೆ ಎಂದು ಹೇಳಿದರು.

2020-21ರಿಂದ 2022-23ನೇ ಸಾಲಿನವರೆಗೆ 7,098 ಶಾಲೆಗಳಿಗೆ 9,604 ಕೊಠಡಿಗಳ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳಿಗೆ ಒಟ್ಟು 12,9768.90 ಲಕ್ಷ ರೂ. ನಿಗದಿಯಾಗಿದ್ದು, ರೂ.9450.139 ಲಕ್ಷ ಬಿಡುಗಡೆ ಮಾಡಿ ಕ್ರಮವಹಿಸಲಾಗಿದೆ ಎಂದರು.

ಯು.ಬಿ. ವೆಂಕಟೇಶ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೊಠಡಿಗಳ ನಿರ್ಮಾಣಕ್ಕೆ ಕೊರತೆ ಅನುದಾನವನ್ನು 2023-24ನೇ ಸಾಲಿನಲ್ಲಿ ಒದಗಿಸಲು ಕ್ರಮವಹಿಸಲಾಗಿದೆ ಎಂದರು.

# ಶ್ರೀ ದಾನಮ್ಮ ದೇವಸ್ಥಾನದಲ್ಲಿ 12ರಂದು ಛಟ್ಟಿ ಅಮವಾಸ್ಯೆ



ದಾವಣಗೆರೆ, ಡಿ.7- ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಪ್ರತಿದಿನ ಸಂಜೆ 7 ಗಂಟೆಗೆ ಪುರಾಣ, ಪ್ರವಚನ ಆರಂಭಗೊಂಡಿದೆ.

ಶ್ರೀ ಪುಟ್ಟರಾಜ ಕವಿ ಗವಾಯಿಗಳವರಿಂದ ರಚಿತ ವಾದ ಶಿವಶರಣೆ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಮತ್ತು ಶ್ರೀ ಅಕ್ಕಮಹಾದೇವಿಯ ಚರಿತ್ರೆ ಪ್ರವಚನವನ್ನು ಶ್ರೀ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ವೇ. ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಇವರು ನಡೆಸಿಕೊಡುತ್ತಿದ್ದಾರೆ. ಸ್ಥಳೀಯ ಶ್ರೀ ವೀರೇಶ್ವರ ಪುಣ್ಯಾಶ್ರಮದ ಯಲಗೂರೇಶ ಟಕ್ಕಳಿಕಿ ಅವರು ತಬಲಾ ವಾದನ ನುಡಿಸುವರು.

ಇದೇ ದಿನಾಂಕ 12 ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಇದ್ದು, ಅಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ.

ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ದೇವರಮನೆ ಗಂಗಮ್ಮ ಮತ್ತು ಮಕ್ಕಳು (ದಾವಣಗೆರೆ), ಶ್ರೀಮತಿ ವೈ. ಭಾರತಿ ಮತ್ತು ವೈ.ವೆಂಕಟೇಶ ರೆಡ್ಡಿ (ಬೆಂಗಳೂರು) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ರೈಲ್ವೆಗೆ ಪ್ರತಿ ವರ್ಷ 80 ಸಾವಿರ ಗಾಲಿಗಳ ಅಗತ್ಯ : ಅಶ್ವಿನಿ ವೈಷ್ಣವ್

ನವದೆಹಲಿ, ಡಿ. 7 – ಭಾರತೀಯ ರೈಲ್ವೆ ಆತ್ಮನಿರ್ಭರವಾಗಲು ಪ್ರತಿ ವರ್ಷ 80 ಸಾವಿರ ಗಾಲಿಗಳನ್ನು ಉತ್ಪಾದಿಸಬೇಕಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮಗೆ ಪ್ರತಿ ವರ್ಷ 80 ಸಾವಿರ ಗಾಲಿಗಳ ಅಗತ್ಯವಿದೆ. ನಾವು 2.30 ಲಕ್ಷದವರೆಗೆ ಗಾಲಿಗಳನ್ನು ಉತ್ಪಾದಿಸುವ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ.

ಹೆಚ್ಚುವರಿ ಗಾಲಿಗಳನ್ನು ರಫ್ತು ಮಾಡಲಾಗುವುದು ಎಂದರು.

# ಕಮೀಷನ್ ದಾಖಲೆ ಸಲ್ಲಿಸಿದ ಕೆಂಪಣ್ಣ

**ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರ ಎಂದು ಆರೋಪ**

ಬೆಂಗಳೂರು, ಡಿ. 7 - ಬಿಜೆಪಿ ಸರ್ಕಾರದ ಅವಧಿಯಲ್ಲಿ 40 ಪರ್ಸೆಂಟ್ ಕಮೀಷನ್ ನಡೆದಿದೆ ಎಂದು ಆರೋಪಿಸಿದ್ದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು, ತಮ್ಮ ಆರೋಪದ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಸಮಿತಿಗೆ ಅವರು ಹಲವಾರು ದಾಖಲೆಗಳನ್ನು ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಆರೋಪಗಳ ತನಿಖೆಗಾಗಿ ಸಮಿತಿ ರಚಿಸಿತ್ತು.

ಈ ಬಗ್ಗೆ ಮಾತನಾಡಿರುವ ಕೆಂಪಣ್ಣ, ನಾನು 6 ಸಾವಿರ ಪುಟಗಳ ದಾಖಲೆಗಳನ್ನು ಸಲ್ಲಿಸಿದ್ದೇನೆ. ಡಿಸೆಂಬರ್ 31ರವರೆಗೆ ಸಮಯ ಕೇಳಿದ್ದೇನೆ. ಆ ವೇಳೆಗೆ ಇನ್ನಷ್ಟು ಗುತ್ತಿಗೆದಾರರು ಮಾಹಿತಿ ನೀಡಲಿದ್ದಾರೆ ಎಂದಿದ್ದಾರೆ. ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ, ಹಾಲಿ ಸರ್ಕಾರದ ವಿರುದ್ಧ ದಾಖಲೆಗಳನ್ನು ಸಲ್ಲಿಸಿದ್ದೇನೆ. ಎಲ್ಲಾ ಇಲಾಖೆಗಳ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆ ಸಲ್ಲಿಸಿದ್ದೇನೆ. ಎಲ್ಲಾ ಜಿಲ್ಲೆಗಳ ಕಾಮಗಾರಿ ಅಕ್ರಮದ ಬಗ್ಗೆ ಮಾಹಿತಿ ನೀಡಿದ್ದೇನೆ ಎಂದರು.

ಈಗಿನ ಸರ್ಕಾರ ಸೇರಿದಂತೆ ಎಲ್ಲಾ ಸರ್ಕಾರಗಳಲ್ಲಿ ಭ್ರಷ್ಟಾಚಾರ ಇದೆ. ಹಿಂದೆ ರಾಜಕಾರಣಿಗಳ ದರ್ಬಾರ್ ಇತ್ತು, ಈಗ ಅಧಿಕಾರಿಗಳ ದರ್ಬಾರ್ ಆಗಿದೆ ಎಂದು ಕೆಂಪಣ್ಣ ಹೇಳಿದರು.

# ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಹಿರೇಮಲ್ಲನಹೊಳೆ ವಿ.ವಿ. ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ. ಮಾರ್ಗಗಳು ಮತ್ತು ನೀರಾವರಿ ಪಂಪ್ ಸೆಟ್‌ಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ವಿದೇಶ ಪ್ರಯಾಣ ಶುಭ ಹಾರೈಕೆ



ಶ್ರೀ ಹೆಚ್.ಬಿ. ಪ್ರಕಾಶ್, ನಿವೃತ್ತ ದಂತ ಅಧಿಕಾರಿ ಮತ್ತು ಶ್ರೀಮತಿ ಎಸ್. ಕಸ್ತೂರಿ ಪ್ರಕಾಶ್
ನಿವೃತ್ತ ನರ್ಸಿಂಗ್ ಸೂಪರಿಂಟೆಂಡೆಂಟ್ ಸಿ.ಜಿ. ಆಸ್ಪತ್ರೆ, ದಾವಣಗೆರೆ ಇವರುಗಳು
ದಿನಾಂಕ : 8.12.2023 ರಿಂದ 20 ದಿನಗಳ ಕಾಲ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳಿಗೆ ಪ್ರವಾಸಕ್ಕೆ ತೆರಳುತ್ತಿದ್ದು, ಇವರಿಗೆ ಶುಭ ಹಾರೈಸುವವರು.

- ✦ ಚಿಂದೋಡಿ ಚಂದ್ರಧರ್ ✦ ಆರ್.ಹೆಚ್. ಪವಾರ್, ನಿವೃತ್ತ ಲ್ಯಾಬ್ ಅಧಿಕಾರಿ
- ✦ ರಾಜಪ್ಪ ಸಿ. ನಿವೃತ್ತ ಜಿಲ್ಲಾ ಖಜಾನೆ ಅಧಿಕಾರಿಗಳು
- ✦ ಪೂರ್ಣಾಚಾರ್, ನಿವೃತ್ತ ಜಿಲ್ಲಾ ಖಜಾನೆ ಅಧಿಕಾರಿಗಳು
- ✦ ಎಲ್. ನಾಗರಾಜ್, ನಿವೃತ್ತ ಎ.ಓ., ಐಟಿಐ
- ✦ ಎಲ್. ರಾಮಚಂದ್ರರಾವ್, ಎಲ್.ಪಿ.ಕೆ. ಜ್ಯೂವೆಲರ್ಸ್
- ✦ ಡಾ|| ಎಲ್. ನಾಗೇಶಯ್ಯ, ನಿವೃತ್ತ ಸಹಾಯಕ ಹೆಲ್ತ್ ಡೆಂಟಿಸ್ಟ್
- ✦ ಎಸ್.ಎಂ. ಲೋಕೇಶ್, ನಿವೃತ್ತ ಫಾರ್ಮಸಿ ಅಧಿಕಾರಿಗಳು
- ✦ ವಸಂತ್ ನಾಯ್ಕ್, ಕೆ. ರಾಮಣ್ಣ, ನಿವೃತ್ತ ಹೋಂ ಗಾರ್ಡ್ಸ್ ಕಮಾಂಡೆಂಟ್
- ✦ ವೀಣಾ ಸ್ಕ್ವೇಯರ್, ರಿಂಗ್ ರೋಡ್, ಸಮಸ್ತ ವಾಯುವಿಹಾರ ಬಳಗದ ಸ್ನೇಹಿತರು

SPARSH HOSPITAL
THE TOUCH OF LIFE

## ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು ಇಲ್ಲಿನ ಪಿತ್ತಕೋಶ
ದಾವಣಗೆರೆ ಸ್ಪರ್ಶ್ ಆಸ್ಪತ್ರೆಯಲ್ಲಿ ಸಮಾಲೋಚನೆಗೆ ಲಭ್ಯರಿರುತ್ತಾರೆ.



**ಡಾ|| ನಿಖಿಲ್ ಬೋಂದಾಡೆ**
MBBS, MD - Internal Medicine, DM - Gastroenterology
ಕನ್ಸಲ್ಟೆಂಟ್ ಗ್ಯಾಸ್ಟ್ರೋಎಂಟೆರೊಲೊಜಿಸ್ಟ್

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

- ಜಾಂಡೀಸ್ • ಫ್ಯಾಟಿ ಲಿವರ್ • ಒಬೆಸಿಟಿ • ಹೆಪಟೈಟಿಸ್ ಬಿ • ಹೆಪಟೈಟಿಸ್ ಸಿ
- ಆಲ್ಕೋಹಾಲ್ ರಿಲೇಟೆಡ್ ಲಿವರ್ ಡಿಸೀಸ್ • ಅಸಿಟ್ಸ್ • ಬ್ಲಡ್ ವೊಮಿಟಿಂಗ್
- ಲಿವರ್ ಸ್ವೆಲ್ಲಿಂಗ್ • ಫ್ಯಾಮಿಲಿ ಹಿಸ್ಟರಿ ಆ ಲಿವರ್ ಡಿಸೀಸ್

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ದಿನಾಂಕ: ಭಾನುವಾರ, 10ನೇ ಡಿಸೆಂಬರ್ 2023 ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ